# ಶ್ರೀ ಜ್ಞಾನ ಸರಸ್ವತಿ ವ್ರತ

ಸಾಕ್ಷಾತ್ ಶ್ರೀ ಸರಸ್ವತಿ ದೇವಿಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ



ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ



ಓಂ ವಾಗ್ದೇವ್ಯೈಚ ವಿದ್ಮಹೇ |
ಬ್ರಹ್ಮ ಪತ್ನ್ಯೈಚ ಧೀಮಹಿ |
ತನ್ನೋ ವಾಣೀ ಪ್ರಚೋದಯಾತ್ ||

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ಜ್ಞಾನ ಸರಸ್ವತಿ ವ್ರತ

**ಸಾಕ್ಷಾತ್ ಶ್ರೀ ಸರಸ್ವತಿ ದೇವಿಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**




**ವಿಶ್ವಪತಿ**

**(ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ)**



**SHRI DESIGNS**

**VEDIC LOGO DESIGNERS**

**www.lordofsevenhills.com**

**Cell : + 91 9849443752**

**Hyderabad**

**2021**

# ಶ್ರೀ ಜ್ಞಾನ ಸರಸ್ವತಿ ವ್ರತ

**ಸಾಕ್ಷಾತ್ ಶ್ರೀ ಸರಸ್ವತಿ ದೇವಿಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© **ಸರ್ವಹಕ್ಕುಗಳು ರಚಯಿತನದು**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ**
**ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ**
**ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY, M.Tech**

**Flat No.903, F-Block, Vertex Sadguru Krupa Apartments**
**Beside Sanghamitra School, Nizampet Road,**
**HYDERABAD – 500 085, India**
**Cell : + 91 9849443752**
**Email : viswapathi@yahoo.com, shridesigns@gmail.com**

# ಮುನ್ನುಡಿ

**ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |**
**ವಾಸರಾ ಪೀಠನಿಲಯೇ ಸರಸ್ವತಿ ನಮೋಸ್ತುತೇ ||**

ಸರಸ್ವತಿ ದೇವಿಯು ಬ್ರಹ್ಮಸ್ವರೂಪಿಣಿ. ಸರ್ವ ವಿದ್ಯೆಗಳಿಗೆ ಅಧಿದೇವತೆ. ವೇದಗಳಿಗೆ ತಾಯಿ. ವಿದ್ಯೆಯ ತಾಯಿ ಸರಸ್ವತಿ ದೇವಿಯು ಮಾಘಶುದ್ದ ಪಂಚಮಿಯ ದಿನ ಉದ್ಭವಿಸಿದಳು. ಈ ವಸಂತ ಪಂಚಮಿಯನ್ನೇ ಶ್ರೀ ಪಂಚಮಿ ಎಂದು ಕೂಡಾ ಹೇಳುತ್ತಾರೆ. ಶ್ರೀ ಪಂಚಮಿಯ ದಿನ ಜ್ಞಾನ ಸ್ವರಸ್ವತಿ ದೇವಾಲಯಕ್ಕೆ ಹೋಗಿ ಆ ತಾಯಿಯ ದರ್ಶನವನ್ನು ಮಾಡಿದರೆ, ಸರ್ವ ವಿದ್ಯೆಗಳು ಲಭಿಸುತ್ತವೆ.

1983ರಲ್ಲಿ ರೀಜನಲ್ ಇಂಜಿನಿಯರಿಂಗ್ ಕಾಲೇಜು, ವರಂಗಲ್.ನಿಂದ ಎಂ.ಟೆಕ್. ಓದಿದ ನಾನು 1984ರವರೆಗೆ ಆಲ್ವಿನ್ ಕಂಪನಿಯಲ್ಲಿ, 1989ವರೆಗೆ ಎಂ.ವಿ.ಎಸ್.ಆರ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉದ್ಯೋಗವನ್ನು ಮಾಡಿದೆನು. 1983ನಲ್ಲಿ ಚಿ|| ಸೌ|| ವೆಂಕಟ ರುಕ್ಮಿಣಿ ವೈದೇಹಿಯೊಂದಿಗೆ ವಿವಾಹ. ಮೂವರು ಮಕ್ಕಳು : ಆನಂದಿ, ಆಮುಕ್ತ ಮತ್ತು ಆದಿತ್ಯ.

1998ರಿಂದ ಬಿಸಿನೆಸ್ ಸಂಸ್ಥೆಗಳಿಗೆ ವೇದಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರದ ಆಧಾರದ ಮೇಲೆ ಹೆಸರನ್ನು ನಿರ್ಣಯಿಸುವುದು, ಲೋಗೋ ಡಿಸೈನ್-ಗಳನ್ನು ಮಾಡುವುದರಲ್ಲಿ ತೊಡಗಿಕೊಂಡಿದ್ದೇನೆ. ಇಲ್ಲಿಯವರೆಗೆ ನಾನು ಲೋಗೋ ಡಿಸೈನ್-ಗಳನ್ನು ಮಾಡಿಕೊಟ್ಟಂತಹ 5,000ಕ್ಕೂ ಹೆಚ್ಚಿನ ಸಂಸ್ಥೆಗಳು ದೇಶ, ವಿದೇಶಗಳಲ್ಲಿ ಪ್ರಮುಖ ಸ್ಥಾನದಲ್ಲಿದೆ ಅಂದರೆ ಅದೆಲ್ಲಾ ಆ ಶ್ರೀ ಶ್ರೀನಿವಾಸನ ಅನುಗ್ರಹವೇ ಆಗಿರುತ್ತದೆ.

ಆ ಶ್ರೀ ಶ್ರೀನಿವಾಸನ ಅನುಗ್ರಹದಿಂದ, ನಾನು ಇಲ್ಲಿಯವರೆಗೆ ಇಪ್ಪತ್ತೆರಡು ಪುಸ್ತಕಗಳನ್ನು ರಚಿಸುವುದು ಸಾಧ್ಯವಾಯಿತು. ಇದರಲ್ಲಿ ಹದಿನಾಲ್ಕು ಪುಸ್ತಕಗಳು ಆ ಶ್ರೀನಿವಾಸನ ವಿಶೇಷಗಳ ಮೇಲೆಯೇ! ಈ ಪುಸ್ತಕಗಳನ್ನೆಲ್ಲಾ ದೇಶ ವಿದೇಶಗಳಲ್ಲಿರುವ ಭಕ್ತರು ನಿತ್ಯ ಪಠಿಸುತ್ತಿರುವುದು ಆ ಸ್ವಾಮಿಯ ಅನುಗ್ರಹವಲ್ಲದೆ ಮತ್ತಿನ್ನೇನಲ್ಲ. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರಿಗೂ ಅನೇಕ ಶುಭಗಳು ಲಭಿಸುತ್ತವೆ. ಆ ಶ್ರೀ ಶ್ರೀನಿವಾಸನ ಅನುಗ್ರಹದಿಂದ ಇವರೆಲ್ಲರೂ ಬಹಳ ಭಾಗ್ಯವಂತರಾಗಿ ಜೀವಿಸುತ್ತಿದ್ದಾರೆ. ಈ ರಚಿಸಿದ ಪುಸ್ತಕಗಳಲ್ಲಿ ಶ್ರೀ ವೇಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ, ಶ್ರೀ ಆನಂದ ಆಂಜನೇಯ, ಶ್ರೀ ಮಹೇಶ್ವರ ವ್ರತ, ಶ್ರೀ ಸುಬ್ರಹ್ಮಣ್ಯ ವ್ರತ, ಶ್ರೀ ಸಾಯಿ ರಕ್ಷಾ ವ್ರತ, ಶ್ರೀ ರಾಮ ರಕ್ಷಾ ವ್ರತ - ಭಕ್ತರಿಗೆ ಅತ್ಯಾನಂದವನ್ನು ಉಂಟುಮಾಡುತ್ತಿದೆ. ಈ ಏಳು ವ್ರತವನ್ನು ನಿತ್ಯವೂ ತುಂಬಾ ಭಕ್ತರ ಮನೆಗಳಲ್ಲಿ, ಅನೇಕ ದೇವಾಲಯಗಳಲ್ಲಿ ಆಚರಿಸಲ್ಪಡುತ್ತಿವೆ. ಇದಕ್ಕೆ ಮಿಗಿಲಾದ ಭಾಗ್ಯವೇನಿರುತ್ತದೆ?

ನನ್ನನ್ನು ಕೆಲವು ಸಂವತ್ಸರಗಳಿಂದ ಕೆಲವುಜನ ಭಕ್ತರು ಶ್ರೀ ಸರಸ್ವತಿ ದೇವಿಯ ವ್ರತವನ್ನು ಬರೆಯಬೇಕೆಂದು ಹೇಳುತ್ತಿದ್ದರು. ಆದರೆ, ದೇವರಿಗೆ ಸಂಬಂಧಪಟ್ಟ ಯಾವುದೇ ಪುಸ್ತಕವನ್ನು ಬರೆಯಲು, ಆ ದೇವರ ಅನುಗ್ರಹಸಿಗುವ ವರೆಗೆ ಬೇರೆಯಲಾಗುವುದಿಲ್ಲ ಎಂದು ನನ್ನ ನಂಬಿಕೆ. ನಾನು ರಚಿಸಿದ ಪ್ರತಿ ಪುಸ್ತಕದಲ್ಲಿಯೂ ಈ ವಿಷಯವು ಪ್ರತ್ಯಕ್ಷವಾಗಿ ಅನುಭವಕ್ಕೆ ಬಂದಿದೆ. ಇಷ್ಟು ದಿನಗಳಿಗೆ ಶ್ರೀ ಸರಸ್ವತಿ ದೇವಿಯ ಕೃಪೆಯಿಂದ ಈ ಪುಸ್ತಕವು ರಚಿಸುವುದು

ಸಾಧ್ಯವಾಯಿತು. ಕೆಲವು ತಿಂಗಳ ಹಿಂದೆ, ನಮ್ಮ ಮೊಮ್ಮಗಳು ಚಿ|| ತನ್ವಿಯ ಅಕ್ಷರಾಭ್ಯಾಸಕ್ಕಾಗಿ ಶ್ರೀ ಕ್ಷೇತ್ರ ಬಾಸರಕ್ಕೆ ಹೋಗುವುದಾಯಿತು. ಆ ದಿವಸವೇ ಈ ಪುಸ್ತಕ ರಚನೆಗೆ ಆ ತಾಯಿಯ ಅನುಗ್ರಹವಾಯಿತು. ಈ ವ್ರತವನ್ನು ಆಚರಿಸುವುದು ತುಂಬಾ ಸುಲಭ. ಯಾರಾದರೂ, ಯಾವಾಗಲಾದರೂ ಈ ವ್ರತವನ್ನು ಆಚರಿಸಿ, ಆ ತಾಯಿಯ ಅನುಗ್ರಹವನ್ನು ಪಡೆಯಬಹುದು. ಶ್ರೀ ಸರಸ್ವತಿ ದೇವಿಯ ಆರಾಧನೆಯಿಂದ ತೇಜಸ್ಸು, ಯಶಸ್ಸು, ಬುದ್ಧಿ, ಜ್ಞಾನ, ವಿಕಾಸ, ಕಾರ್ಯಸಿದ್ಧಿ, ಶೀಘ್ರ ಕಲ್ಯಾಣ, ಸತ್ಸಂತಾನ ಪ್ರಾಪ್ತಿ, ಪದೋನ್ನತಿ, ಆರೋಗ್ಯ, ಅಷ್ಟೈಶ್ವರ್ಯ ಲಭಿಸುತ್ತದೆ.

ಈ ಪುಸ್ತಕದ ರಚನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿರುವ ಪ್ರತೀಯೊಬ್ಬರಿಗೂ, ಈ ವ್ರತವನ್ನು ಭಕ್ತಿಯಿಂದ ಆಚರಿಸಿರುವ ತಮಗೂ, ವ್ರತಕಥೆಯನ್ನು ಹೇಳಿದವರಿಗೂ, ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ ಸಕಲ ಆಯುರಾರೋಗ್ಯ ಸೌಭಾಗ್ಯ ಶ್ರೇಯಸ್ಸುಗಳನ್ನು ಅನುಗ್ರಹಿಸಬೇಕೆಂದು ಆ ಶ್ರೀ ಸರಸ್ವತಿ ದೇವಿಯನ್ನು ಪ್ರಾರ್ಥಿಸುತ್ತಿದ್ದೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||

|| ಶ್ರೀ ಸರಸ್ವತಿ ದೇವಿ ಕಟಾಕ್ಷ ಸಿದ್ಧಿರಸ್ತು ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

ದಿನಾಂಕ: 16-1-2021

*******

# ಈ ವ್ರತವನ್ನು ಹೇಗೆ ಆಚರಿಸಬೇಕು?

- ಈ ವ್ರತವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ ಭೇದಭಾವವಿಲ್ಲದೇ ಓದಬಹುದು. ಸ್ತ್ರೀ - ಪುರುಷ ಬೇಧವಿಲ್ಲ. ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಪಂಚಮಿ, ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಾಗಲೀ ಓದಿದರೆ ಮತ್ತಷ್ಟು ಶುಭಪ್ರದ. ಬುಧವಾರ, ಗುರುವಾರ ಅಥವಾ ಶುಕ್ರವಾರದ ದಿನ ಪಠಣಮಾಡಿದರೆ ಅತ್ಯಂತ ಶುಭಪ್ರದ. ಜನ್ಮ ಜನ್ಮಗಳ ಪಾಪಗಳು ನಶಿಸುತ್ತವೆ. ಬಹಳ ಪುಣ್ಯವು ಲಭಿಸುತ್ತದೆ. ಈ ವ್ರತವನ್ನು ಆಚರಿಸುವ ದಿನ ಖಂಡಿತಾ ಉಪವಾಸ ಇರಬೇಕೆಂಬ ನಿಯಮ ಇರುವುದಿಲ್ಲ.

- ಈ ವ್ರತವನ್ನು ಆಚರಿಸುವ ಮೊದಲು ಒಂದುಸಾರಿ ಮನಸ್ಸಿನಲ್ಲೇ ಶ್ರೀ ಗಣಪತಿಗೆ, ನವಗ್ರಹದೇವತೆಗಳಿಗೆ, ಅಷ್ಟದಿಕ್ಪಾಲಕರಿಗೆ ನಮಸ್ಕರಿಸಬೇಕು. ಆನಂತರ ನಿಮ್ಮ ಹೆಸರು, ನಿಮ್ಮ ಕುಟುಂಬದ ಸದಸ್ಯರ ಹೆಸರುಗಳು, ನಕ್ಷತ್ರ ಮತ್ತು ಗೋತ್ರವನ್ನು ಮನಸ್ಸಿನಲ್ಲೇ ಸ್ಮರಿಸಿ ವ್ರತವನ್ನು ಪ್ರಾರಂಭಿಸಬೇಕು. ಶ್ರೀ ಸರಸ್ವತಿ ದೇವಿಯ ಅಷ್ಟೋತ್ತರ ನಾಮಗಳನ್ನು ಪಠಿಸಬೇಕು. ನಂತರ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ, ಶ್ರೀ ಸರಸ್ವತಿ ದೇವಿಗೆ ನಿಮ್ಮ ಯೋಗ್ಯತಾನುಸಾರ ಯಾವುದಾದರು ಹಣ್ಣನ್ನು ಸಮರ್ಪಿಸಬೇಕು.

- ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳು ಈ ವ್ರತದಲ್ಲಿರುವ ಐದು ಕಥೆಗಳನ್ನು ಓದಿ, ಸರಸ್ವತಿ ದೇವಿಗೆ ಬಾಳೆಹಣ್ಣುಗಳನ್ನು ನೈವೇದ್ಯವಿಟ್ಟು, ವ್ರತವನ್ನು ಸುಲಭವಾಗಿ ಆಚರಿಸಬಹುದು. ಅವರು ಬರೆಯುವ ಪರೀಕ್ಷೆಯಲ್ಲಿ, ತಪ್ಪದೆ ಅವರು ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣರಾಗುತ್ತಾರೆ.

- ಯಾವ ಶಂಕರಮಠದಲ್ಲಾಗಲೀ ಕುಳಿತುಕೊಂಡು ಈ ಐದು ಕಥೆಗಳನ್ನು ಓದಿ, ಅಲ್ಲಿ ಪೂಜಿಸಲ್ಪಡುತ್ತಿರುವ ಶಾರದಾ ಮಾತೆಗೆ ಬಾಳೆಹಣ್ಣುಗಳನ್ನು ನೈವೇದ್ಯಕ್ಕೆ ಇಟ್ಟರೆ ವಿಶೇಷ ಫಲವು ಸಿಗುತ್ತದೆ. ನೀವು ನೆನೆದ ಕೆಲಸಗಳೆಲ್ಲಾ ನಿರ್ವಿಘ್ನವಾಗಿ ಪೂರ್ತಿಯಾಗುತ್ತದೆ. ವಿವಾಹವಾಗದವರಿಗೆ ತಕ್ಷಣ ವಿವಾಹವು ಜರುಗುತ್ತದೆ. ಸಂತಾನವಿಲ್ಲದವರಿಗೆ ತ್ವರಿತದಲ್ಲೇ ಸತ್ಸಂತಾನವು ಉಂಟಾಗುತ್ತದೆ. ವಿದ್ಯಾರ್ಥಿಗಳಾಗಲಿ ಅಥವಾ ಅವರ ತಂದೆತಾಯಿಯರು ಕೂಡಾ ಹೀಗೆ ಆಚರಿಸಿದಲಿ ಅವರು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾರೆ. ಬೆಳಿಗ್ಗೆಯಾಗಲೀ, ಸಾಯಂಕಾಲವಾಗಲೀ ಯಾವಾಗಲಾದರೂ ಆಚರಿಸಬಹುದು. ಉಪವಾಸವಿರಬೇಕಾದ ಅಗತ್ಯವಿಲ್ಲ.

- ಪ್ರತ್ರಿ ವಿದ್ಯಾಸಂಸ್ಥೆಗಳಲ್ಲಿಯು ಈ ವ್ರತವನ್ನು ಸುಲಭವಾಗಿ ಆಚರಿಸಬಹುದು. ವಿದ್ಯಾಸಂಸ್ಥೆಗಳ ಯಜಮಾನರ ಮನೆಯಲ್ಲಿ ಆಚರಿಸಿದರೂ, ಆ ವಿದ್ಯಾಸಂಸ್ಥೆಯು ಬಹಳ ಅಭಿವೃದ್ಧಿ ಹೊಂದುತ್ತದೆ. ಪ್ರತಿ ಸಂವತ್ಸರವೂ ಶಾಲೆ, ಕಾಲೇಜುಗಳು ಪ್ರಾರಂಭವಾದ ಮೊದಲನೆಯ ತಿಂಗಳಿನಲ್ಲಿ, ಉಪಾಧ್ಯಾಯರು ಎಲ್ಲಾ ತರಗತಿಗಳಲ್ಲಿಯೂ ಈ ಕಥೆಗಳನ್ನು ವಿದ್ಯಾರ್ಥಿಗಳಿಗೆ ಓದಿ, ಕೇಳಿಸಿ, ಸರಸ್ವತಿ ದೇವಿಗೆ ಬಾಳೆಹಣ್ಣುಗಳನ್ನು ನೈವೇದ್ಯಕ್ಕಿಟ್ಟು ಆ ಬಾಳೆಹಣ್ಣನ್ನು ವಿದ್ಯಾರ್ಥಿಗಳಿಗೆ ಪ್ರಸಾದವಾಗಿ ಕೊಡಬಹುದು. ಈ ಪ್ರಸಾದವನ್ನು ಸ್ವೀಕರಿಸಿದ ವಿದ್ಯಾರ್ಥಿಗಳಿಗೆ ಆ ಸರಸ್ವತಿ ದೇವಿಯ ಅನುಗ್ರಹವು

ಉಂಟಾಗುತ್ತದೆ. ಬಹಳ ಶ್ರದ್ಧೆಯಿಂದ ಓದುತ್ತಾರೆ. ಅವರಿಗೆ ಒಳ್ಳೆಯ ಜ್ಞಾಪಕಶಕ್ತಿ, ಏಕಾಗ್ರತೆ ಉಂಟಾಗುತ್ತದೆ. ಯಾವುದೇ ದಿನವಾದರೂ ಬೆಳಿಗ್ಗೆ 9-00 ಗಂಟೆಯ ಸಮಯದಲ್ಲಿ ತರಗತಿಯಲ್ಲಿ ಮೇಜಿನ ಮೇಲೆ ಶ್ರೀ ಸರಸ್ವತಿ ದೇವಿಯ ಚಿತ್ರಪಟವನ್ನು ಇಟ್ಟು, ಈ ಐದು ಕಥೆಗಳನ್ನು ಉಪಾಧ್ಯಾಯರು ಓದಿ, ವಿದ್ಯಾರ್ಥಿಗಳಿಗೆ ಕೇಳಿಸಬಹುದು.

- ❖ ಪರೀಕ್ಷೆಗಳು ಪ್ರಾರಂಭವಾಗುವ ಮೊದಲು, ಪ್ರತಿ ತರಗತಿಗಳಲ್ಲಿ ವಿದ್ಯಾರ್ಥಿಗಳು ಯಾವುದೇ ಒಂದು ಒಳ್ಳೆಯ ದಿನ ನೋಡಿ, ಬೆಳಿಗ್ಗೆ ಈ ಐದು ವ್ರತದ ಕಥೆಗಳನ್ನು ಓದಿ, ಕೇಳಿಸಿ, ಬಾಳೆಹಣ್ಣುಗಳನ್ನು ನೈವೇದ್ಯವಾಗಿ ಇಡಬಹುದು. ಆ ನೈವೇದ್ಯವನ್ನು ಸ್ವೀಕರಿಸಿದ ವಿದ್ಯಾರ್ಥಿಗಳು ಒಳ್ಳೆಯ ಅಂಕಗಳನ್ನು ಪಡೆಯುತ್ತಾರೆ. ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಾರೆ.

- ❖ ಅಕ್ಷರಾಭ್ಯಾಸದ ದಿನ ಈ ವ್ರತವನ್ನು ಆಚರಿಸಿದರೆ ಆ ಬಾಲಕ/ಬಾಲಕಿಯರಿಗೆ ಒಳ್ಳೆಯ ಬುದ್ಧಿ, ಜ್ಞಾನ ಉಂಟಾಗುತ್ತದೆ. ಉನ್ನತ ಶಿಕ್ಷಣವನ್ನು ಪಡೆಯುತ್ತಾರೆ.

- ❖ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವ ಮೊದಲು, ಈ ವ್ರತವನ್ನು ಆಚರಿಸಿದರೆ, ಆ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದು, ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಾರೆ. ಸಂದರ್ಶನಗಳಿಗೆ (Interview) ಹೋಗುವ ಮೊದಲು ಕೂಡಾ ಈ ವ್ರತವನ್ನು ಆಚರಿಸಿದರೆ ಇಷ್ಟಸಿದ್ಧಿಯಾಗುವುದು.

- ❖ ಈ ವ್ರತವನ್ನು ಆಚರಿಸುವಾಗ ಪತಿ-ಪತ್ನಿ ಇಬ್ಬರು ಖಂಡಿತಾ ಒಟ್ಟಿಗೆ ಇದ್ದು ಆಚರಿಸಬೇಕೆಂಬ ನಿಯಮ ಇಲ್ಲ. ಪತಿಗೆ ಅನುಕೂಲವಾದಾಗ ಪತಿ, ಪತ್ನಿಗೆ ಅನುಕೂಲವಾದಾಗ ಪತ್ನಿ, ಹೀಗೆ ಅವರವರ ಅನುಕೂಲದಂತೆ ಅವರು ಆಚರಿಸಬಹುದು. ಸಾಧ್ಯವಾದಾಗ ಇಬ್ಬರೂ ಒಟ್ಟಿಗೆ ಆಚರಿಸಬಹುದು.

- ❖ ದುರದೃಷ್ಟದಿಂದ ಪತ್ನಿಯನ್ನು ಕಳೆದುಕೊಂಡ ಪುರುಷರು, ಪತಿಯನ್ನು ಕಳೆದುಕೊಂಡ ಸ್ತ್ರೀಯರು ಕೂಡ ನೀರಭ್ಯಂತರವಾಗಿ ಈ ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದವರಿಗೆ ಪೂರ್ತಿ ಮನಶ್ಶಾಂತಿ ಉಂಟಾಗುತ್ತದೆ.

- ❖ ಸಂತಾನಭಾಗ್ಯವಿಲ್ಲದವರು ಯಾವ ದೇವಾಲಯದಲ್ಲಾಗಲಿ ಶುಕ್ರವಾರದ ದಿನ ಈ ಪುಸ್ತಕವನ್ನು ಓದಿದರೆ ಖಂಡಿತಾ ಒಳ್ಳೆಯ ಸಂತಾನವನ್ನು ಪಡೆಯುತ್ತಾರೆ. ವಿವಾಹವಾಗದ ಕನ್ಯೆಯರಾಗಲೀ, ಯುವಕರಾಗಲೀ, ಈ ವಿಧವಾಗಿ ಓದಿದರೆ ಶೀಘ್ರದಲ್ಲೇ ವಿವಾಹವು ಜರುಗುತ್ತದೆ.

- ❖ ದೂರದೇಶದಲ್ಲಿರುವ ನಿಮ್ಮ ಮಕ್ಕಳ ನಿಮಿತ್ತ, ನೀವು ಕೂಡ ಓದಬಹುದು. ಅವರಿಗೆ ವಿದ್ಯೆ, ವಿವಾಹ, ಸಂತಾನ, ಉದ್ಯೋಗ, ಆರೋಗ್ಯಕ್ಕಾಗಿ ಈ ಪುಸ್ತಕವನ್ನು ಶುಕ್ರವಾರದ ದಿನ ಯಾವುದೇ ದೇವಾಲಯದಲ್ಲಾಗಲೀ ಓದಿದರೆ ತಕ್ಷಣ ಫಲಿತವು ಸಿಗುತ್ತದೆ.

- ❖ ಕೆಲವರಿಗೆ ವಯಸ್ಸಾಗುತ್ತಾ ಸಹಜವಾಗಿ ಕಡಿಮೆಯಾಗುವ ಜ್ಞಾಪಕಶಕ್ತಿಯು, ಈ ವ್ರತದ ಆಚರಣೆಯಿಂದ ಅವರಿಗೆ ನೆನಪಿನ ಶಕ್ತಿಯು ವೃದ್ಧಿಸುತ್ತದೆ. ಅವರು ಮಾಡುವ

ಕೆಲಸಕಾರ್ಯಗಳಲ್ಲಿ ಏಕಾಗ್ರತೆಯನ್ನು ಪಡೆಯುತ್ತಾರೆ. ಮನಸ್ಸು ಬಹಳ ಪ್ರಶಾಂತವಾಗಿರುತ್ತದೆ.

- ಸಂಗೀತ, ನೃತ್ಯ, ಚಿತ್ರಲೇಖನ ಇಂಥಹ ಕಲೆಗಳಲ್ಲಿ ಪ್ರಾವೀಣ್ಯತೆಯನ್ನು ಬಯಸುವವರು, ಈ ವ್ರತವನ್ನು ಯಾವುದೇ ಶುಕ್ರವಾರದ ದಿನ ಆಚರಿಸಿದರೆ ಅವರಿಗೆ ಒಳ್ಳೆಯ ಅವಕಾಶಗಳು ಲಭಿಸಿ, ತುಂಬಾ ಹೆಸರು, ಪ್ರಖ್ಯಾತಿಯನ್ನು ಹೊಂದುತ್ತಾರೆ. ಅವರವರ ಪಾಂಡಿತ್ಯದಲ್ಲಿ ಅವರಿಗೆ ಒಳ್ಳೆಯ ಹೆಸರು ದೊರಕುತ್ತದೆ. ಈ ಕ್ಷೇತ್ರದ ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಗಳನ್ನು ಬರೆಯುವ ಮೊದಲು, ಈ ವ್ರತವನ್ನು ಆಚರಿಸಿದರೆ, ಆ ಪರಿಕ್ಷೆಗಳಲ್ಲಿ ಉನ್ನತ ಶ್ರೇಣಿಯ ಅಂಕಗಳನ್ನು ಪಡೆದು ಉತ್ತೀರ್ಣರಾಗುತ್ತಾರೆ.

ಈ ವಿಧವಾಗಿ, ಯಾವ ರೀತಿಯಲ್ಲಾಗಲಿ, ಯಾವ ದಿನದಲ್ಲಾಗಲಿ ಈ ಪುಸ್ತಕವನ್ನು ಓದಿ, ಶ್ರೀ ಸರಸ್ವತಿ ದೇವಿಯ ಅನುಗ್ರಹವನ್ನು ಪಡೆಯಬಹುದು.

*******

# ಶ್ರೀ ಸರಸ್ವತಿ ಅಷ್ಟೋತ್ತರ ಶತನಾಮಾವಳಿ:

ಓಂ ಶ್ರೀ ಸರಸ್ವತ್ಯೈ ನಮಃ|
ಓಂ ಮಹಾಭದ್ರಾಯೈ ನಮಃ|
ಓಂ ಮಹಮಾಯಾಯೈ ನಮಃ|
ಓಂ ವರಪ್ರದಾಯೈ ನಮಃ|
ಓಂ ಶ್ರೀಪ್ರದಾಯೈ ನಮಃ|
ಓಂ ಪದ್ಮನಿಲಯಾಯೈ ನಮಃ|
ಓಂ ಪದ್ಮಾಕ್ಷ್ಯೈ ನಮಃ|
ಓಂ ಪದ್ಮವಕ್ತ್ರಾಯೈ ನಮಃ|
ಓಂ ಶಿವಾನುಜಾಯೈ ನಮಃ|
ಓಂ ಪುಸ್ತಕಭೃತೇ ನಮಃ| (10)
ಓಂ ಜ್ಞಾನಮುದ್ರಾಯೈ ನಮಃ|
ಓಂ ರಮಾಯೈ ನಮಃ|
ಓಂ ಪರಾಯೈ ನಮಃ|
ಓಂ ಕಾಮರೂಪಾಯೈ ನಮಃ|
ಓಂ ಮಹಾವಿದ್ಯಾಯೈ ನಮಃ|
ಓಂ ಮಹಾಪಾತಕನಾಶಿನ್ಯೈ ನಮಃ|
ಓಂ ಮಹಾಶ್ರಯಾಯೈ ನಮಃ|
ಓಂ ಮಾಲಿನ್ಯೈ ನಮಃ|
ಓಂ ಮಹಾಭೋಗಾಯೈ ನಮಃ|
ಓಂ ಮಹಾಭುಜಾಯೈ ನಮಃ| (20)
ಓಂ ಮಹಾಭಾಗ್ಯಾಯೈ ನಮಃ|
ಓಂ ಮಹೋತ್ಸಾಹಾಯೈ ನಮಃ|
ಓಂ ದಿವ್ಯಾಂಗಾಯೈ ನಮಃ|
ಓಂ ಸುರವಂದಿತಾಯೈ ನಮಃ|
ಓಂ ಮಹಾಕಾಳ್ಯೈ ನಮಃ|
ಓಂ ಮಹಾಪಾಶಾಯೈ ನಮಃ|
ಓಂ ಮಹಾಕಾರಾಯೈ ನಮಃ|
ಓಂ ಚಂದ್ರವದನಾಯೈ ನಮಃ|
ಓಂ ಚಂದ್ರಲೇಖಾವಿಭೂಷಿತಾಯೈ ನಮಃ|
ಓಂ ಸಾವಿತ್ರ್ಯೈ ನಮಃ| (30)
ಓಂ ಸುರಸಾಯೈ ನಮಃ|
ಓಂ ದೇವ್ಯೈ ನಮಃ|
ಓಂ ದಿವ್ಯಾಲಂಕಾರಭೂಷಿತಾಯೈ ನಮಃ|
ಓಂ ವಾಗ್ದೇವ್ಯೈ ನಮಃ|
ಓಂ ವಸುಧಾಯೈ ನಮಃ|
ಓಂ ತೀವ್ರಾಯೈ ನಮಃ|

ಓಂ ಮಹಾಭದ್ರಾಯೈ ನಮಃ |
ಓಂ ಮಹಾಬಲಾಯೈ ನಮಃ |
ಓಂ ಭೋಗದಾಯೈ ನಮಃ |
ಓಂ ಭಾರತ್ಯೈ ನಮಃ | (40)
ಓಂ ಭಾಮಾಯೈ ನಮಃ |
ಓಂ ಗೋವಿಂದಾಯೈ ನಮಃ |
ಓಂ ಗೋಮತ್ಯೈ ನಮಃ |
ಓಂ ಶಿವಾಯೈ ನಮಃ |
ಓಂ ಜಟಿಲಾಯೈ ನಮಃ |
ಓಂ ವಿಂಧ್ಯವಾಸಾಯೈ ನಮಃ |
ಓಂ ವಿಂಧ್ಯಾಚಲವಿರಾಜಿತಾಯೈ ನಮಃ |
ಓಂ ಚಂಡಿಕಾಯೈ ನಮಃ |
ಓಂ ವೈಷ್ಣವ್ಯೈ ನಮಃ |
ಓಂ ಬ್ರಾಹ್ಮ್ಯೈ ನಮಃ | (50)
ಓಂ ಬ್ರಹ್ಮಜ್ಞಾನೈಕಸಾಧನಾಯೈ ನಮಃ |
ಓಂ ಸೌದಾಮಿನ್ಯೈ ನಮಃ |
ಓಂ ಸುಧಾಮೂರ್ತಯೇ ನಮಃ |
ಓಂ ಸುಭದ್ರಾಯೈ ನಮಃ |
ಓಂ ಮಹಾಂಕುಶಾಯೈ ನಮಃ |
ಓಂ ಸೀತಾಯೈ ನಮಃ |
ಓಂ ವಿಮಲಾಯೈ ನಮಃ |
ಓಂ ವಿಶ್ವಾಯೈ ನಮಃ |
ಓಂ ವಿದ್ಯುನ್ಮಾಲಾಯೈ ನಮಃ |
ಓಂ ವೈಷ್ಣವ್ಯೈ ನಮಃ | (60)
ಓಂ ಚಂದ್ರಿಕಾಯೈ ನಮಃ |
ಓಂ ಬ್ರಹ್ಮಾಜಾಯಾಯೈ ನಮಃ |
ಓಂ ಮಹಾಫಲಾಯೈ ನಮಃ |
ಓಂ ತ್ರಯೀಮೂರ್ತ್ಯೈ ನಮಃ |
ಓಂ ತ್ರಿಕಾಲಜ್ಞಾಯೈ ನಮಃ |
ಓಂ ತ್ರಿಗುಣಾಯೈ ನಮಃ |
ಓಂ ಶಾಸ್ತ್ರರೂಪಿಣ್ಯೈ ನಮಃ |
ಓಂ ಶುಂಭಾಸುರ ಪ್ರಮಥಿನ್ಯೈ ನಮಃ |
ಓಂ ಶುಭದಾಯೈ ನಮಃ |
ಓಂ ಸರ್ವಾತ್ಮಿಕಾಯೈ ನಮಃ | (70)
ಓಂ ರಕ್ತ ಬೀಜನಿಹಂತ್ರ್ಯೈ ನಮಃ |
ಓಂ ಚಾಮುಂಡಾಯೈ ನಮಃ |
ಓಂ ಅಂಬಿಕಾಯೈ ನಮಃ |
ಓಂ ಮುಂಡಕಾಯಪ್ರಹರಣಾಯೈ ನಮಃ |

ಓಂ ಧೂಮ್ರಲೋಚನಮರ್ಧನಾಯೈ ನಮಃ |
ಓಂ ಸರ್ವದೇವಸ್ತುತಾಯೈ ನಮಃ |
ಓಂ ಸೌಮ್ಯಾಯೈ ನಮಃ |
ಓಂ ಸುರಾಸುರನಮಸ್ಕೃತಾಯೈ ನಮಃ |
ಓಂ ಕಾಳರಾತ್ರ್ಯೈ ನಮಃ |
ಓಂ ಕಳಾಧಾರಾಯೈ ನಮಃ | (80)
ಓಂ ರೂಪಸೌಭಾಗ್ಯದಾಯಿನ್ಯೈ ನಮಃ |
ಓಂ ಸುರಪೂಜಿತಾಯೈ ನಮಃ |
ಓಂ ಸುವಾಸಿಯೈ ನಮಃ |
ಓಂ ಸುನಾಸಾಯೈ ನಮಃ |
ಓಂ ವಿನಿದ್ರಾಯೈ ನಮಃ |
ಓಂ ಪದ್ಮಲೋಚನಾಯೈ ನಮಃ |
ಓಂ ವಿದ್ಯಾರೂಪಾಯೈ ನಮಃ |
ಓಂ ವಿಶಾಲಾಕ್ಷ್ಯೈ ನಮಃ |
ಓಂ ವಾಗ್ದೇವ್ಯೈ ನಮಃ |
ಓಂ ವರಾರೋಹಾಯೈ ನಮಃ | (90)
ಓಂ ವಾರಾಹ್ಯೈ ನಮಃ |
ಓಂ ವಾರಿಜಾಸನಾಯೈ ನಮಃ |
ಓಂ ಚಿತ್ರಾಂಬರಾಯೈ ನಮಃ |
ಓಂ ಚಿತ್ರಗಂಧಾಯೈ ನಮಃ |
ಓಂ ಚಿತ್ರಮಾಲ್ಯವಿಭೂಷಿತಾಯೈ ನಮಃ |
ಓಂ ಕಾಂತಾಯೈ ನಮಃ |
ಓಂ ಕಾಮಪ್ರದಾಯೈ ನಮಃ |
ಓಂ ವಂದ್ಯಾಯೈ ನಮಃ |
ಓಂ ವಿದ್ಯಾಧರಸುಪೂಜಿತಾಯೈ ನಮಃ |
ಓಂ ಶ್ವೇತಾನನಾಯೈ ನಮಃ | (100)
ಓಂ ನೀಲಭುಜಾಯೈ ನಮಃ |
ಓಂ ಚತುರ್ವರ್ಗ ಫಲಪ್ರದಾಯೈ ನಮಃ |
ಓಂ ಚತುರಾನನ ಸಾಮ್ರಾಜ್ಯೈ ನಮಃ |
ಓಂ ರಕ್ತಮಧ್ಯಾಯೈ ನಮಃ |
ಓಂ ನಿರಂಜನಾಯೈ ನಮಃ |
ಓಂ ಹಂಸಾಸನಾಯೈ ನಮಃ |
ಓಂ ನೀಲಜಂಘಾಯೈ ನಮಃ |
ಓಂ ಬ್ರಹ್ಮವಿಷ್ಣುಶಿವಾತ್ಮಿಕಾಯೈ ನಮಃ | (108)

**|| ಶ್ರೀ ಸರಸ್ವತಿ ಅಷ್ಟೋತ್ತರ ಶತನಾಮಾವಳಿ: ಸಮಾಪ್ತಂ ||**

*******

# ಅಕ್ಷಯಾಭ್ಯಾಸ ಪೂಜೆ

(ಅಕ್ಷರಾಭ್ಯಾಸ ಸಮಯದಲ್ಲಿ ಈ ಪೂಜೆಯನ್ನು ಮಾಡಬೇಕು)

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ |
ವಿದ್ಯಾರಂಭಂ ಕರಿಷ್ಯಾಮಿ ಸಿದ್ದಿರ್ಭವತು ಮೇ ಸದಾ ||

ಪದ್ಮಪತ್ರ ವಿಶಾಲಾಕ್ಷಿ ಪದ್ಮಕೇಸರಿ ವರ್ಣಿನಿ |
ನಿತ್ಯಂ ಪದ್ಮಲಯಾಮ್ ದೇವಿ ಸಾಮಾಂಪಾತು ಸರಸ್ವತಿ ||

ಓಂ ಐಂ ಸರಸ್ವತ್ಯೈ ನಮಃ | ಶಿರೋ ಮೇ ಪಾತು |
ಓಂ ಐಂ ಸರಸ್ವತ್ಯೈ ನಮಃ | ಫಾಲ ಮೇ ಪಾತು |
ಓಂ ಐಂ ಸರಸ್ವತ್ಯೈ ನಮಃ | ನೇತ್ರಯುಗ್ಮಮ್ ಪಾತು |
ಓಂ ಐಂ ಸರಸ್ವತ್ಯೈ ನಮಃ | ನಾಸಾಂ ಪಾತು |
ಓಂ ಐಂ ಸರಸ್ವತ್ಯೈ ನಮಃ | ಜ್ಯೇಷ್ಠಮ್ ಪಾತು |
ಓಂ ಐಂ ಸರಸ್ವತ್ಯೈ ನಮಃ | ದಂತಂಪಂಕ್ತಿ ಪಾತು |
ಓಂ ಐಂ ಸರಸ್ವತ್ಯೈ ನಮಃ | ಕಂಠಮ್ ಪಾತು |
ಓಂ ಐಂ ಸರಸ್ವತ್ಯೈ ನಮಃ | ಪಕ್ಷಮ್ ಪಾತು |
ಓಂ ಐಂ ಸರಸ್ವತ್ಯೈ ನಮಃ | ಜಿಹ್ವಾಗ್ರವಾಸಿನ್ಯೈ ಪಾತು |
ಓಂ ಐಂ ಸರಸ್ವತ್ಯೈ ನಮಃ | (ಮೂರು ಸಲ)

ಈ ಬೀಜಾಕ್ಷರಗಳಿಂದ ಸ್ಲೇಟ್ ಮತ್ತು ಪುಸ್ತಕಗಳನ್ನು ಪೂಜಿಸಿ
"ಓಂ ಶಿವಾಯ ಸಿದ್ದಂ ನಮಃ" ಎಂದು ಬರೆಯಿಸಿ, ಅಕ್ಷರಗಳನ್ನು ಕಲಿಸಬೇಕು.

*******

# ಶ್ರೀ ಸರಸ್ವತಿ ದ್ವಾದಶನಾಮ ಸ್ತೋತ್ರಮ್

ಸರಸ್ವತೀ ತ್ವಿಯಂ ದೃಷ್ಟ್ವಾ ವೀಣಾಪುಸ್ತಕಧಾರಿಣೀ |
ಹಂಸವಾಹ ಸಮಾಯುಕ್ತಾ ವಿದ್ಯಾದಾನಕರೀ ಮಮ || || 1 ||
ಪ್ರಥಮಂ ಭಾರತೀನಾಮಂ ದ್ವಿತೀಯಂ ಚ ಸರಸ್ವತೀ |
ತೃತೀಯಂ ಶಾರದಾದೇವೀ ಚತುರ್ಥಂ ಹಂಸವಾಹನೀ || || 2 ||
ಪಂಚಮಂ ಜಗತೀಖ್ಯಾತಂ ಷಷ್ಠಂ ವಾಗೀಶ್ವರೀ ತಥಾ |
ಕೌಮಾರೀ ಸಪ್ತಮಂ ಪ್ರೋಕ್ತ ಮಷ್ಟಮಂ ಬ್ರಹ್ಮಚಾರಿಣೀ || || 3 ||
ನವಮಂ ಬುದ್ಧಿಧಾತ್ರೀ ಚ ದಶಮಂ ವರದಾಯಿನೀ |
ಏಕಾದಶಂ ಕ್ಷುದ್ರಘಂಟಾ ದ್ವಾದಶಂ ಭುವನೇಶ್ವರೀ || || 4 ||
ಬ್ರಾಹ್ಮೀ ದ್ವಾದಶನಾಮಾನಿ ತ್ರಿಸಂಧ್ಯಂ ಯಃ ಪಠೇನ್ನರಃ |
ಸರ್ವಸಿದ್ಧಿಕರೀ ತಸ್ಯ ಪ್ರಸನ್ನಾ ಪರಮೇಶ್ವರೀ |
ಸಾ ಮೇ ವಸತು ಜಿಹ್ವಾಗ್ರೇ ಬ್ರಹ್ಮರೂಪಾ ಸರಸ್ವತೀ || || 5 ||

*******

# ಶ್ರೀ ಜ್ಞಾನ ಸರಸ್ವತಿ ವ್ರತ

## ಪ್ರಥಮ ಅಧ್ಯಾಯ

## **ರಾಮ ಶರ್ಮನ ಕಥೆ**

ಪೂರ್ವಕಾಲದಲ್ಲಿ ಗೌತಮಿ ನದಿತೀರದಲ್ಲಿ ರಾಮಪುರಂ ಎಂಬ ಗ್ರಾಮವಿತ್ತು. ಆ ಗ್ರಾಮದಲ್ಲಿ ರಾಮ ಶರ್ಮ, ಸುಮತಿ ಎಂಬ ದಂಪತಿಗಳಿದ್ದರು. ರಾಮ ಶರ್ಮನು ಆ ಊರಲ್ಲಿರುವ ಶ್ರೀ ಸೀತಾರಾಮಚಂದ್ರ ದೇವಾಲಯದಲ್ಲಿ ಅರ್ಚಕತ್ವವನ್ನು ನಿರ್ವಹಿಸುತ್ತಾ ಜೀವಿಸುತ್ತಿದ್ದನು. ಸಮಯ ಸಿಕ್ಕಾಗ, ಆ ಊರವರ ಮನೆಗಳಲ್ಲಿ ಪೌರೋಹಿತ್ಯವನ್ನು ಕೂಡಾ ಮಾಡುತ್ತಾ ಕಾಲ ಕಳೆಯುತ್ತಿದ್ದನು. ಆ ದಂಪತಿಗಳ ಜೀವನವು ಚೆನ್ನಾಗಿಯೇ ಸಾಗುತ್ತಿತ್ತು. ಆದರೆ, ಸಂತಾನಭಾಗ್ಯವಿಲ್ಲದ್ದು ಕೊರತೆಯಾಗಿತ್ತು. ವಿವಾಹವಾಗಿ ಆರು ಸಂವತ್ಸರವಾದರೂ ಸಂತಾನಭಾಗ್ಯವಾಗಲಿಲ್ಲ. ಸಂತಾನಕ್ಕಾಗಿ ಅವರು ಅನೇಕ ವ್ರತಗಳನ್ನು ಮಾಡಿದರು. ಎಷ್ಟೋ ದೇವತೆಗಳನ್ನು ಪ್ರಾರ್ಥಿಸಿದರು. ಅನೇಕ ಪುಣ್ಯಕ್ಷೇತ್ರಗಳ ದರ್ಶನ ಮಾಡಿದರು. ಆದರೂ ಯಾವುದೇ ಫಲ ಸಿಗಲಿಲ್ಲ. ಈ ವಿಷಯವಾಗಿ ಅವರಿಗೆ ಯಾವಾಗಲೂ ಆತಂಕವಿರುತ್ತಿತ್ತು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ಆ ಊರಿಗೆ ದೂರದ ದೇಶದಿಂದ ಒಬ್ಬ ಸಾಧುವು ಬಂದನು. ಆ ಸಾಧುವು ಊರಹೊರಗಿರುವ ಒಂದು ದೊಡ್ಡ ಮರದ ಕೆಳಗೆ ತನ್ನ ಶಿಷ್ಯರೊಟ್ಟಿಗೆ ಬೀಡು ಬಿಟ್ಟನು. ಹಗಲೆಲ್ಲ ಪೂಜೆಗಳಿಂದ, ಭಜನೆಗಳಿಂದ ಸಮಯ ಕಳೆದು, ಸಾಯಂಕಾಲ ತನ್ನ ಹತ್ತಿರ ಬಂದವರಿಗೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದನು. ಊರವರು ತಮ್ಮ ಮನೆಗೆ ಬರಬೇಕೆಂದು ಎಷ್ಟೇ ಒತ್ತಾಯ ಮಾಡಿದರೂ ಹೋಗುತ್ತಿರಲಿಲ್ಲ. ಆ ಸಾಧುವಿಗೆ ಭೂತ, ಭವಿಷ್ಯತ್, ವರ್ತಮಾನ ಕಾಲಗಳು ತಿಳಿದಿದೆಯೆಂದು, ಬಹಳ ಮಹಿಮೆಗಳು ಇದ್ದವನೆಂದು ಜನರು ಹೇಳಿಕೊಳ್ಳುತ್ತಿದ್ದರು. ಇದನ್ನು ಕೇಳಿ, ಒಂದುದಿನ ರಾಮ ಶರ್ಮನು ಹೆಂಡತಿಯೊಂದಿಗೆ ಕೂಡಿಕೊಂಡು ಆ ಸಾಧುವಿನ ದರ್ಶನವನ್ನು ಮಾಡಿದನು. ಆ ದಂಪತಿಗಳಿಬ್ಬರೂ ಆ ಸಾಧುವಿಗೆ ನಮಸ್ಕರಿಸಿ ತಮಗೆ ಸಂತಾನಭಾಗ್ಯವಾಗುವ ಉಪಾಯ ಹೇಳಿರೆಂದು ಪ್ರಾರ್ಥಿಸಿದರು. ಆ ಸಾಧುವು ಸ್ವಲ್ಪ ಹೊತ್ತು ಕಣ್ಣುಗಳನ್ನು ಮುಚ್ಚಿಕೊಂಡು, ಕೈಯಲ್ಲಿ ಒಂದು ಮಾವಿನಹಣ್ಣನ್ನು ತೆಗೆದುಕೊಂಡು ಸುಮತಿಯ ಕೈಯಲ್ಲಿ ಕೊಟ್ಟನು. ಮರುದಿನ ಏಕಾದಶಿಯೆಂದು, ಮುಂಜಾನೆ ಸ್ನಾನಮಾಡಿದ ನಂತರ ಈ ಹಣ್ಣನ್ನು ತಿನ್ನೆಂದು, ಖಂಡಿತಾ ಮುದ್ದಾದ ಮಗನು ಹುಟ್ಟುತ್ತಾನೆಂದು ಆಶೀರ್ವದಿಸಿದನು. ರಾಮ ಶರ್ಮ ದಂಪತಿಗಳು ಸಾಧುವಿಗೆ ನಮಸ್ಕರಿಸಿ ಮನೆಗೆ ಹೋದರು.

ಮನೆಯನ್ನು ಸೇರಿದಾಗ, ಮನೆ ಹೊರಗೆ ರಾಮ ಶರ್ಮನ ಬಾವಮೈದನು ಹೆಂಡತಿ ಮಕ್ಕಳೊಂದಿಗೆ ಬಂದು ಇವರಿಗಾಗಿ ಕಾಯುತ್ತಿದ್ದನು. ಅಣ್ಣ ಅತ್ತಿಗೆ ಬಂದದ್ದನ್ನು ನೋಡಿ ಸುಮತಿಗೆ ತುಂಬಾ ಸಂತೋಷವಾಯಿತು. ಅವರನ್ನು ಮನೆಯೊಳಗೆ ಕರೆದುಕೊಂಡು ಹೋಗಿ, ಸಾಧುವು ಕೊಟ್ಟ ಮಾವಿನಹಣ್ಣನ್ನು ಕವಾಟಿನಲ್ಲಿ ಜಾಗ್ರತ್ತೆಯಾಗಿಟ್ಟಳು. ಆ ರಾತ್ರಿ ಅವರೆಲ್ಲರೂ ಹರಟೆ ಹೊಡೆಯುತ್ತಾ ತಡವಾಗಿ ಮಲಗಿದರು.

ಬೆಳಗ್ಗೆ ಬಾವಮೈದ ಕೃಷ್ಣ ಶರ್ಮನಿಗೆ ತುರ್ತು ಕೆಲಸದ ನಿಮಿತ್ತ ಹೊರಗೆ ಹೋಗಬೇಕಾದುದರಿಂದ ಸುಮತಿಯು ಮುಂಜಾನೆದ್ದು ಅಣ್ಣನಿಗೆ ಅಡಿಗೆ ತಯಾರಿಸಿದಳು. ಈ ಅವಸರದಲ್ಲಿ ಸಾಧುವು ಕೊಟ್ಟಿದ್ದ ಮಾನಿನಹಣ್ಣನ್ನು ಮರೆತುಬಿಟ್ಟಳು. ರಾಮ ಶರ್ಮ

ದಂಪತಿಗಳಿಗೆ ಆ ದಿನ ರಾತ್ರಿಯಾದರೂ ಈ ವಿಷಯವು ನೆನಪಿಗೆ ಬರಲಿಲ್ಲ. ಮರುದಿವಸ ಮುಂಜಾನೆ ಸ್ನಾನ ಮಾಡಿ ಹಣ್ಣನ್ನು ಕೈಯೊಳಗೆ ತೆಗೆದುಕೊಂಡಳು. ಆದರೆ ಆ ಹಣ್ಣಿನ ಒಂದು ಪಕ್ಕಕ್ಕೆ ಕೆಲವು ಇರುವೆಗಳು ಕಚ್ಚಿಕೊಂಡಿದ್ದವು. ಅವಳು ಆ ಇರುವೆಗಳನ್ನು ತೆಗೆದು, ಭಕ್ತಿಯಿಂದ ಕೂಡಲೇ ತಿಂದಳು. ಮನಸ್ಸಿನಲ್ಲಿ ಆ ಸಾಧುವನ್ನು ನೆನೆದು ನಿಧಾನ ಮಾಡಿದ್ದಕ್ಕೆ ಕ್ಷಮಿಸಬೇಕೆಂದು ಪ್ರಾರ್ಥಿಸಿದಳು. ತನಗೆ ಒಳ್ಳೆಯ ಸಂತಾನವನ್ನು ಪ್ರಸಾದಿಸಿರೆಂದು ಸಕಲ ದೇವತೆಗಳನ್ನು ಬೇಡಿಕೊಂಡಳು.

ಆ ಮಾವಿನಹಣ್ಣಿನ ಪ್ರಭಾವದಿಂದ ಸುಮತಿಯೂ ಕೆಲವು ದಿನಗಳಲ್ಲೇ ಗರ್ಭಧರಿಸಿ ಮುದ್ದಾದ ಮಗನನ್ನು ಹಡೆದಳು. ಆ ಮಗುವಿಗೆ ಪ್ರಭಾಕರ ಶರ್ಮ ಎಂದು ನಾಮಕರಣ ಮಾಡಿ, ಮುದ್ದಿನಿಂದ ಸಾಕತೊಡಗಿದರು. ಐದನೇ ವಯಸ್ಸು ಬಂದಾಗ ಆಶ್ರಮ ಪಾಠಶಾಲೆಗೆ ಕಳುಹಿಸಿದರು. ಆದರೆ, ಸಾಧುವು ಕೊಟ್ಟ ಪ್ರಸಾದವನ್ನು ಸ್ವಲ್ಪ ನಿರ್ಲಕ್ಷ್ಯ ಮಾಡಿದ ಕಾರಣದಿಂದ ಹುಡುಗನಿಗೆ ಉಪಾಧ್ಯಾಯರು ಬಹಳ ಪ್ರಯತ್ನಪಟ್ಟರೂ ಸ್ವಲ್ಪ ಕೂಡಾ ವಿದ್ಯೆ ತಲೆಗೆ ಹತ್ತಲಿಲ್ಲ. ಮೂರು ಸಂವತ್ಸರಗಳನ್ನು ಕಳೆದರೂ ಸ್ವಲ್ಪವೂ ಜ್ಞಾನ ಹತ್ತಲಿಲ್ಲ. ರಾಮ ಶರ್ಮನು ಬಹಳ ಬಾಧೆಯಿಂದ ಒಂದುದಿನ ಮಗನಿಗೆ ತುಂಬಾ ಬೈದನು. ತಂದೆಯ ಮಾತುಗಳಿಗೆ ಪ್ರಭಾಕರ ಶರ್ಮನು ಬಹಳ ನೋವನ್ನನುಭವಿಸಿದನು. ಮುಂಜಾನೆ ಎದ್ದ ಕೂಡಲೇ ಮನೆ ಬಿಟ್ಟು ಹೊರಟು ಹೋದನು. ಊರಹೊರಗೆ ಬಂದು ಕಾಡು ದಾರಿಯ ಮೂಲಕ ನಡೆಯತೊಡಗಿದನು.

ಮಗನು ಕಾಣಿಸದೆ, ರಾಮ ಶರ್ಮನು ಬಹಳ ಹುಡುಕಿದನು. ಆದರೂ ಲಾಭವಿಲ್ಲದೆ ಹೋಯಿತು. ಕಾಡಿಗೆ ಹೋದ ಪ್ರಭಾಕರ ಶರ್ಮನು ಆಚೆ – ಈಚೆ ತಿರುಗಿ ರಾತ್ರಿ ಸಮಯಕ್ಕೆ ಒಂದು ಪ್ರಾಚೀನ ಮನೆ ಬಳಿ ಸೇರಿಕೊಂಡನು. ಅದು ಯಾವುದೋ ದೇವಾಲಯದ ಹಾಗೆ ಭಾಸವಾಯಿತು. ಕತ್ತಲಾದುದರಿಂದ ಭಯಪಟ್ಟು ರಾತ್ರಿ ಅಲ್ಲೇ ವಿಶ್ರಮಿಸಲು ನಿಶ್ಚಯಿಸಿದನು. ಗರ್ಭಾಲಯಕ್ಕೆ ಹೋಗಿ ಅಲ್ಲೆಲ್ಲಾ ಸ್ವಚ್ಛಗೊಳಿಸಿ ಒಂದು ಬದಿಯಲ್ಲಿ ಮಲಗಿಕೊಂಡನು. ಆ ರಾತ್ರಿಯಲ್ಲಿ ಪ್ರಭಾಕರ ಶರ್ಮನಿಗೆ ಒಬ್ಬ ದೇವತೆಯು ಪ್ರತ್ಯಕ್ಷಳಾಗಿ ಹೀಗೆ ಹೇಳಿದಳು. 'ಮಗ, ನಾನು ಸಕಲ ಜ್ಞಾನಕ್ಕೆ ಅಧಿದೇವತೆಯಾದ ಸರಸ್ವತಿಯು. ಬಹಳ ಕಾಲದಿಂದ ಯಾರಿಗೂ ನೆನಪಿಗೆ ಬಾರದ ಈ ದೇವಾಲಯವನ್ನು ನೀನು ಸ್ವಚ್ಛ ಮಾಡಿದ್ದಿ. ಅದರಲ್ಲೂ ಈ ದಿನ ವಸಂತ ಪಂಚಮಿ. ನನಗೆಷ್ಟೋ ಪ್ರಿಯವಾದ ದಿನ. ಆ ಪುಣ್ಯದಿನದಲ್ಲಿ ನನ್ನ ದೇವಾಲಯವನ್ನು ಸ್ವಚ್ಛಮಾಡಿದುದರಿಂದ ನಿನಗೆ ತುಂಬಾ ಪುಣ್ಯವು ದೊರಕಿದೆ. ನಿನಗೆ ಸಕಲ ವಿದ್ಯೆಗಳನ್ನು ಅನುಗ್ರಹಿಸುತ್ತಿದ್ದೇನೆ. ಬೆಳಿಗ್ಗೆ ನಿನ್ನ ಊರಿಗೆ ಹೋಗು. ನಿನಗೆ ಸಮಸ್ತ ಶ್ರೇಯಸ್ಸುಗಳು ಉಂಟಾಗುತ್ತದೆ' ಎಂದು ಹೇಳಿ ಮಾಯವಾದಳು.

ಪ್ರಭಾಕರ ಶರ್ಮನು ಮುಂಜಾನೆ ಎದ್ದಾಗ ಅದ್ಭುತವಾದ ಸರಸ್ವತಿ ಮಾತೆಯ ವಿಗ್ರಹವನ್ನು ನೋಡಿದನು. ದೇವಾಲಯವನ್ನು ಸ್ವಚ್ಛಗೊಳಿಸಿ ಆ ತಾಯಿಗೆ ನಮಸ್ಕರಿಸಿದನು. ಅನಾಯಾಸವಾಗಿ ಅವನ ಬಾಯಿಂದ ಅದ್ಭುತವಾದ ಕವಿತ್ವವು ಬಂತು. ಆ ತಾಯಿಯನ್ನು ಬಹಳ ದಿವ್ಯವಾಗಿ ಕೀರ್ತಿಸಿದನು. ಆ ತಾಯಿಯ ಅನುಗ್ರಹದಿಂದ ಅವನು ತಿರುಗಿ ಮನೆಯನ್ನು ಸೇರಿದನು. ತಂದೆತಾಯಿಗೆ ನಡೆದ ವಿಷಯವನ್ನೆಲ್ಲ ಹೇಳಿದನು. ರಾಮ ಶರ್ಮ ದಂಪತಿಗಳು ಬಹಳ ಸಂತೋಷಪಟ್ಟು, ಊರಿನ ಮುಖ್ಯಸ್ಥರನ್ನು ಕರೆದುಕೊಂಡು ಕಾಡಿನ ಒಳಗೆ ಹೋಗಿ, ಅಲ್ಲಿ ಜೀರ್ಣಾವಸ್ಥೆಯಲ್ಲಿರುವ ಸರಸ್ವತಿ ದೇವಾಲಯದ ಹತ್ತಿರ ಸೇರಿದರು. ಎಲ್ಲರು ಒಟ್ಟಾಗಿ ಆ

ದೇವಾಲಯವನ್ನು ಅಭಿವೃದ್ಧಿಗೊಳಿಸಿ ಸ್ವಲ್ಪ ಸಮಯದ ನಂತರ ಬ್ರಹ್ಮಾಂಡವಾದ ಉತ್ಸವಗಳನ್ನು ಮಾಡಿದರು. ಅಲ್ಲಿಯ ದೇವಾಲಯ ಗೋಡೆಗಳ ಮೇಲಿರುವ ಶೀಲಾಶಾಸನಗಳ ಮುಖಾಂತರ ಅಲ್ಲಿರುವ ಸರಸ್ವತೀದೇವಿಯನ್ನು ಸಾಕ್ಷಾತ್ ವ್ಯಾಸಮಹರ್ಷಿಯು ಪ್ರತಿಷ್ಠಿಸಿದರೆಂದು ತಿಳಿದುಕೊಂಡರು. ಅನಂತರ ಸ್ವಲ್ಪಸಮಯದಲ್ಲೇ ಆ ಪ್ರದೇಶವು ಶ್ರೀ ಸರಸ್ವತಿದೇವಿಯ ಪ್ರಮುಖ ಪುಣ್ಯಕ್ಷೇತ್ರವಾಗಿ ಪ್ರಸಿದ್ಧಿ ಹೊಂದಿತು. ಆ ತಾಯಿಯನ್ನು ಆರಾಧಿಸಿದವರಿಗೆ ಸಂಪೂರ್ಣ ಜ್ಞಾನವು ಉಂಟಾಗುತ್ತದೆಂದು ಭಕ್ತರು ಗ್ರಹಿಸಿದರು.

ವಿದ್ಯಾದೇವಿ ಸರಸ್ವತೀಯು ಮಾಘ ಶುದ್ಧ ಪಂಚಮಿಯ ದಿನ ಉದ್ಭವಿಸಿದಳು. ಭಕ್ತರ ಪಾಲಿಗೆ ಕಲ್ಪವಲ್ಲಿಯಾದ ಆ ತಾಯಿಯು ತನ್ನ ಭಕ್ತ 'ವಿಶ್ವಪತಿ ರಾಮಕೃಷ್ಣಮೂರ್ತಿ'ಗೆ ವೈಶಾಖ ಶುದ್ಧ ಪಂಚಮಿಯ ದಿನ ಈ 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಅನುಗ್ರಹಿಸಿದಳು. ಯಾವುದೇ ಮಾಸದ ಪಂಚಮಿಯ ದಿನ ಈ ವ್ರತವನ್ನು ಆಚರಿಸಿದರೆ, ಅದ್ಭುತವಾದ ಫಲವನ್ನು ಪಡೆಯಬಹುದು. ಪ್ರತ್ಯೇಕವಾಗಿ ವಸಂತ ಪಂಚಮಿಯ ದಿನ ಸರಸ್ವತಿದೇವಿಯ ಯಾವುದೇ ದೇವಾಲಯದಲ್ಲಾಗಲಿ, ಯಾವುದೇ ವಿದ್ಯಾಸಂಸ್ಥೆಯಲ್ಲಾಗಲೀ, ಭಕ್ತಿಯಿಂದ ಈ ವ್ರತ ಕಥೆಗಳನ್ನು ಓದಿದವರಿಗೆ, ಪ್ರಸಾದವನ್ನು ಸ್ವೀಕರಿಸಿದವರಿಗೆ ಸಂಪೂಣ ಜ್ಞಾನವು ಲಭಿಸುತ್ತದೆ. ಆ ತಾಯಿಗೆ ಬಾಳೆಹಣ್ಣು, ಬೊಗರಿ ಹಣ್ಣು ಅಥವಾ ಕಬ್ಬಿನ ತುಂಡಾಗಲೀ ನಿವೇದಿಸಬಹುದು. ಈ ವ್ರತವನ್ನು ಆಚರಿಸಿದವರ ಮಕ್ಕಳು, ಉನ್ನತ ವಿದ್ಯಾವಂತರಾಗುತ್ತಾರೆ. ಎಲ್ಲಾ ಪರೀಕ್ಷೆಗಳಲ್ಲೂ ಉತ್ತೀರ್ಣರಾಗುತ್ತಾರೆ. ಆ ಕುಟುಂಬವು ಸಮಸ್ತ ಶ್ರೇಯಸ್ಸುಗಳನ್ನು ಹೊಂದುತ್ತದೆ.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು

ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |
ವಾಸರಾ ಪೀಠನಿಲಯೇ ಸರಸ್ವತಿ ನಮೋಸ್ತುತೇ ||

*******

ಎರಡನೇ ಅಧ್ಯಾಯ

## ಜ್ಞಾನಸರಸ್ವತಿ ಪೀಠದ ಕಥೆ

ಪೂರ್ವಕಾಲದಲ್ಲಿ ಆಂಧ್ರಪ್ರದೇಶದ ಗೋದಾವರಿ ನದಿತೀರದಲ್ಲಿ ಮಹಾದೇವಪುರಂ ಎಂಬ ಗ್ರಾಮವಿತ್ತು. ಆ ಗ್ರಾಮದಲ್ಲಿ ಒಂದು ಪುರಾತನ ಶಿವಾಲಯವಿತ್ತು. ಆ ದೇವಾಲಯದ ಶಿವಲಿಂಗವನ್ನು ಸಾಕ್ಷಾತ್ ಬ್ರಹ್ಮದೇವರೇ ಪ್ರತಿಷ್ಟಿಸಿದನೆಂದು ಪ್ರಜೆಗಳು ಹೇಳಿಕೊಳ್ಳುತ್ತಿದ್ದರು. ಮಹಾದೇವಪುರಂನಲ್ಲಿ ಪ್ರಜೆಗಳೆಲ್ಲರೂ ಒಬ್ಬರಿಗೊಬ್ಬರೂ ಸಹಾಯಮಾಡಿಕೊಳ್ಳುತ್ತಾ ಬಹಳ ಅನ್ಯೋನ್ಯರಾಗಿದ್ದರು. ಆ ಗ್ರಾಮದಲ್ಲಿ ಪಾಠಶಾಲೆ ಇಲ್ಲದುದರಿಂದ ಮಕ್ಕಳನ್ನು ದೂರ ಪ್ರದೇಶಗಳಿಗೆ ಕಳುಹಿಸಬೇಕಾಗಿತ್ತು. ಗ್ರಾಮದಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಗ್ರಾಮದ ಹಿರಿಯರು ತುಂಬಾ ಸಲ ಪ್ರಯತ್ನಿಸಿದರೂ, ಯಾಕೋ ಅದು ಕಾರ್ಯರೂಪಕ್ಕೆ ತರಲಾಗಲಿಲ್ಲ. ಯಾವಾಗಲೂ ಯಾವುದಾದರೂ ಅಡೆತಡೆಗಳು ಬರುತ್ತಿತ್ತು.

ಹೀಗಿರುವಾಗ, ಆ ಊರಿಗೆ ಒಂದುದಿನ ಪುರುಷೋತ್ತಮ ಶಾಸ್ತ್ರಿ ಎಂಬ ಪಂಡಿತನು ಕುಟುಂಬ ಸಮೇತನಾಗಿ ಬಂದನು. ಪುರುಷೋತ್ತಮ ಶಾಸ್ತ್ರಿಯು ಸಕಲ ಶಾಸ್ತ್ರ ಪಂಡಿತನು. ಊರವರೆಲ್ಲರೂ ಅವನನ್ನು ತಮ್ಮ ಊರಲ್ಲೇ ಇರಬೇಕೆಂದು ಪ್ರಾರ್ಥಿಸಿದರು. ಅವನ

ಕುಟುಂಬಕ್ಕೆ ಸುಖವಾಗಿ ಬದುಕಲು ಎಲ್ಲಾ ವ್ಯವಸ್ಥೆಗಳನ್ನು ಮಾಡುತ್ತೇವೆಂದು, ಅಲ್ಲೇ ಕುಟುಂಬದೊಟ್ಟಿಗೆ ಇದ್ದು ತಮ್ಮ ಊರಿನ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂದು ಹೇಳಿದರು. ಅದಕ್ಕೆ ಪುರುಷೋತ್ತಮ ಶಾಸ್ತ್ರಿಯು ಒಪ್ಪಿಕೊಂಡನು. ಕೆಲವು ದಿನಗಳಲ್ಲೇ ಆ ಊರಿನಲ್ಲಿ ಒಂದು ಚಿಕ್ಕ ಪಾಠಶಾಲೆ ಪ್ರಾರಂಭವಾಯಿತು. ಮಕ್ಕಳೆಲ್ಲರೂ ಇಲ್ಲೇ ಅಧ್ಯಯನ ಮಾಡತೊಡಗಿದರು.

ಪುರುಷೋತ್ತಮ ಶಾಸ್ತ್ರಿಯ ಪಾಠಶಾಲೆಯು ಎರಡು ಸಂವತ್ಸರಗಳು ಚೆನ್ನಾಗಿ ನಡೆಯಿತು. ಆದರೆ, ಮೂರನೇ ಸಂವತ್ಸರದಿಂದ ಕಷ್ಟಗಳು ಪ್ರಾರಂಭವಾಯಿತು. ಯಾಕೋಯೇನೋ ಅಲ್ಲಿ ಓದಿದ ವಿದ್ಯಾರ್ಥಿಗಳಿಗೆ ವಿದ್ಯೆಯು ಸರಿಯಾಗಿ ಹಿಡಿಸಲ್ಲಿಲ್ಲ. ಆದ್ದರಿಂದ, ತಂದೆತಾಯಿಯರು ತಮ್ಮ ಮಕ್ಕಳನ್ನು ನಿಧಾನವಾಗಿ ಈ ಪಾಠಶಾಲೆಯಿಂದ ಬಿಡಿಸಿ, ಬೇರೆ ಊರಿಗೆ ಕಳುಹಿಸಿದರು. ಹೀಗೆ ಐದು ಸಂವತ್ಸರಗಳು ಆಗುವಷ್ಟೋತ್ತಿಗೆ ಪಾಠಶಾಲೆಯಲ್ಲಿ ಕೇವಲ ಐದು ವಿದ್ಯಾರ್ಥಿಗಳು ಮಾತ್ರವೇ ಉಳಿದರು.

ಪುರುಷೋತ್ತಮ ಶಾಸ್ತ್ರಿಗೆ ತುಂಬಾ ನೋವಾಯಿತು. ಈ ಪಾಠಶಾಲೆಯನ್ನು ನಡೆಸುವುದು ಸಾಧ್ಯವಿಲ್ಲವೆಂದು ಕೊಂಡನು. ಆದರೆ, ಹಾಗೆಂದು ಈ ಊರು ಬಿಟ್ಟು ತಿರುಗಿ ತನ್ನ ಊರಿಗೆ ಹೋಗಬೇಕೆಂದುಕೊಂಡರೆ ಮನಸ್ಸು ಒಪ್ಪಲಿಲ್ಲ. ಐದು ಸಂವತ್ಸರಗಳಿಂದ ಇಲ್ಲೇ ಇದ್ದುದರಿಂದ ಈ ಊರಿನ ಮೇಲೆ ತುಂಬಾ ಮಮಕಾರ ಹುಟ್ಟಿಕೊಂಡಿತು.

ಪುರುಷೋತ್ತಮ ಶಾಸ್ತ್ರಿಗೆ ಒಂದುದಿನ ಒಂದು ಆಲೋಚನೆ ಹುಟ್ಟಿತು. ವಿದ್ಯೆಯ ತಾಯಿ ಸರಸ್ವತಿ ದೇವಿಯನ್ನು ಹೇಗಾದರೂ ಪ್ರಸನ್ನೀಕರಿಸಿ ಕೊಳ್ಳಬೇಕೆಂದುಕೊಂಡನು. ಆ ತಾಯಿಯ ಅನುಗ್ರಹವಿದ್ದರೆ ಮಾತ್ರ ಈ ಪಾಠಶಾಲೆಗೆ ವೈಭವ ಉಂಟಾಗುತ್ತದೆಂದು ಭಾವಿಸಿದನು. ಹೇಗಾದರೂ ಮಾಡಿ ಆ ತಾಯಿಯನ್ನು ಪ್ರಸನ್ನೀಕರಿಸಿಕೊಳ್ಳಬೇಕು ಎಂದು ಧೃಡ ಸಂಕಲ್ಪವನ್ನು ಮಾಡಿದನು. ಆ ಮರುದಿನದಿಂದ ಪುರುಷೋತ್ತಮ ಶಾಸ್ತ್ರಿಯು ಕಠೋರ ಉಪವಾಸವನ್ನು ಮಾಡುತ್ತಾ ಕೇವಲ ಹಣ್ಣುಗಳನ್ನು ಮಾತ್ರವೇ ಆಹಾರವಾಗಿ ಸ್ವೀಕರಿಸುತ್ತಾ, ಪ್ರತಿದಿನವೂ ಸರಸ್ವತಿದೇವಿಯನ್ನು ಅನೇಕ ಸ್ತೋತ್ರಗಳಿಂದ ಪೂಜಿಸಿದನು.

ಹೀಗೆ ನಲವತ್ತು ದಿನಗಳಾದಾಗ ವಿದ್ಯಾದೇವಿ ಸರಸ್ವತಿಯು ಕರುಣೆತೋರಿದಳು. ಆ ತಾಯಿಯು ಪುರುಷೋತ್ತಮ ಶಾಸ್ತ್ರಿಗೆ ಸ್ವಪ್ನ ದರ್ಶನವಿತ್ತು ಹೀಗೆ ಹೇಳಿದಳು. 'ಮಗನೇ! ಪುರುಷೋತ್ತಮ ಶಾಸ್ತ್ರಿ! ನಿನ್ನ ಕಠೋರ ದೀಕ್ಷೆಗೆ ಮೆಚ್ಚಿದೆನು. ಈ ಪಾಠಶಾಲೆಯು ತಿರುಗಿ ದಿವ್ಯವೈಭವವನ್ನು ಪಡೆಯುವ ಮಾರ್ಗವನ್ನು ಹೇಳುತ್ತೇನೆ. ಸಾವಧಾನವಾಗಿ ಕೇಳಬೇಕು' ಎಂದು ಹೀಗೆ ಹೇಳತೊಡಗಿದಳು. 'ಮಗನೇ! ಪುರುಷೋತ್ತಮ ಶಾಸ್ತ್ರಿ! ನೀನು 'ಶ್ರೀ ಜ್ಞಾನ ಸರಸ್ವತಿ ವ್ರತ' ಎಂಬ ವ್ರತವನ್ನು ಆಚರಿಸು, ಇದು ನನಗೆ ತುಂಬಾ ಪ್ರಿಯಕರವಾದದ್ದು. ಈ ವ್ರತವು ಮಹಾಮಾನ್ವಿತವಾದದ್ದು. ಈ ವ್ರತವನ್ನು ಆದಷ್ಟು ಬೇಗ ನಿನ್ನ ಪಾಠಶಾಲೆಯ ಪ್ರಾಂಗಣದಲ್ಲಿ ಆಚರಿಸು. ಈ ವ್ರತದ ಪ್ರಭಾವದಿಂದ ನಿನ್ನ ಪಾಠಶಾಲೆಗೆ ಹೆಸರು, ಪ್ರಖ್ಯಾತಿಗಳು ಉಂಟಾಗುತ್ತದೆ. ಈ ವ್ರತದಲ್ಲಿರುವ ಐದು ಕಥೆಗಳನ್ನು ಓದಿದವರಿಗೆ ಸಕಲ ಜ್ಞಾನವೂ ಲಭಿಸುತ್ತದೆ. ಈ ವ್ರತವನ್ನು ಆಚರಿಸಿದವರಿಗೆ ಸಮಸ್ತ ಶ್ರೇಯಸ್ಸುಗಳು ಉಂಟಾಗುತ್ತದೆ. ಯಾವುದೇ ಪಾಠಶಾಲೆಯಲ್ಲಾಗಲೀ, ಯಾವುದೇ ವಿದ್ಯಾಸಂಸ್ಥೆಯಲ್ಲಾಗಲೀ, ಗುರುವಿನಿಂದಾಗಲೀ, ಪಾಠಶಾಲೆಯ ಯಜಮಾನನಿಂದಾಗಲೀ, ಆ ಊರವರಿಂದಾಗಲೀ ಈ ವ್ರತವನ್ನು ಆಚರಿಸಬಹುದು. ಯಾವ ಪಾಠಶಾಲೆಯಲ್ಲಿ ಈ ವ್ರತವನ್ನು ವರ್ಷಕ್ಕೆ

ಒಮ್ಮೆಯಾದರೂ ಆಚರಿಸುತ್ತಾರೋ, ಆ ಪಾಠಶಾಲೆಯ ವಿದ್ಯಾರ್ಥಿಗಳೆಲ್ಲರೂ ಸಂಪೂರ್ಣ ಜ್ಞಾನವಂತರಾಗುತ್ತಾರೆ. ಎಲ್ಲಾ ವಿದ್ಯೆಗಳಲ್ಲಿಯೂ ಉನ್ನತಿಯನ್ನು ಪಡೆಯುತ್ತಾರೆ. ಅವರಿಗೆ ನನ್ನ ಅಪಾರ ಅನುಗ್ರಹವು ಉಂಟಾಗುತ್ತದೆ. ಬಹಳ ಅದ್ಭುತವಾದ ಜ್ಞಾನಶಕ್ತಿಯು ಉಂಟಾಗುತ್ತದೆ. ಈ ವ್ರತದಲ್ಲಿರುವ ಐದು ಕಥೆಗಳನ್ನು ಯಾವ ವಿದ್ಯಾರ್ಥಿಯಾದರೂ ಯಾವುದೇ ಪರೀಕ್ಷೆಯನ್ನು ಬರೆಯುವ ಮೊದಲು ಓದಿದರೆ ಅವರು ಆ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದು, ಉತ್ತಮ ಶ್ರೇಣಿಯೊಂದಿಗೆ ಉತ್ತೀರ್ಣರಾಗುತ್ತಾರೆ. ಪಾಠಶಾಲೆಯಲ್ಲಿ ಯಾವುದೇ ಮಾಸದಲ್ಲಿ ಪಂಚಮಿ, ಏಕಾದಶಿ ತಿಥಿಗಳಲ್ಲಿ ಆಚರಿಸಬಹುದು. ಆ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಈ ಐದು ಕಥೆಗಳನ್ನು ಕೇಳಿಸಿದರೆ, ಅವರು ಉತ್ತಮ ವಿದ್ಯಾವಂತರಾಗುತ್ತಾರೆ. ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಾರೆ. ಯಾವ ವಿದ್ಯಾಸಂಸ್ಥೆಯಲ್ಲಿ ಈ ವ್ರತವನ್ನು 'ಶ್ರೀ ಪಂಚಮಿ'ಯ ದಿನ ಆಚರಿಸುತ್ತಾರೋ ಅಲ್ಲಿ ಓದುವ ವಿದ್ಯಾರ್ಥಿಗಳು ಎಲ್ಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾರೆ. ಆ ವಿದ್ಯಾಸಂಸ್ಥೆಗಳಿಗೆ ಎಲ್ಲಿಲ್ಲದ ಹೆಸರು, ಪ್ರಖ್ಯಾತಿಗಳು ಲಭಿಸುತ್ತವೆ. ಬರುವ ವಾರವೇ 'ಶ್ರೀ ಪಂಚಮಿ', ನೀನು ಆದಿನ ನಿನ್ನ ಪಾಠಶಾಲೆಯಲ್ಲಿ ಈ ವ್ರತವನ್ನು ಆಚರಿಸು. ಇಷ್ಟ ಸಿದ್ಧಿಯಾಗುತ್ತದೆ' ಎಂದು ಹೇಳಿ ವಿದ್ಯಾದೇವಿ ಸರಸ್ವತಿಯು ಅದೃಶ್ಯವಾದಳು.

ಈ ಮಾತುಗಳನ್ನು ಕೇಳಿದ ಪುರುಷೋತ್ತಮ ಶಾಸ್ತ್ರಿಯು ಅತ್ಯಾನಂದ ಪಟ್ಟನು. ಆ ತಾಯಿಯು ತನ್ನನ್ನು ಅನುಗ್ರಹಿಸಿದಕ್ಕೆ ಆ ಜಗನ್ಮಾತೆಯನ್ನು ಅನೇಕ ವಿಧಗಳಿಂದ ಹೊಗಳಿದನು. ಮರುದಿನ ಬೆಳಿಗ್ಗೆ ಊರಹಿರಿಯರಿಗೆ ರಾತ್ರಿ ತನಗೆ ಬಂದ ಸ್ವಪ್ನದ ಬಗ್ಗೆ ಹೇಳಿದನು. ಅವರೆಲ್ಲರೂ ಬಹಳ ಸಂತೋಷಪಟ್ಟರು. ಊರವರೆಲ್ಲರ ಸಹಾಯದಿಂದ ಪುರುಷೋತ್ತಮ ಶಾಸ್ತ್ರಿಯು ಶ್ರೀ ಪಂಚಮಿಯ ದಿನ 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಬಹಳ ವೈಭವದಿಂದ ಆಚರಿಸಿದನು. ಈ ವ್ರತವನ್ನು ಆಚರಿಸಿದ ಫಲವಾಗಿ ಆ ಪಾಠಶಾಲೆಯು ಸ್ವಲ್ಪ ಸಮಯದಲ್ಲೇ ತುಂಬಾ ಅಭಿವೃದ್ಧಿ ಹೊಂದಿತು. ಅನತಿಕಾಲದಲ್ಲೇ ಸುತ್ತುಮುತ್ತಿನ ಊರಿನಲ್ಲಿ ಬಹಳ ಹೆಸರುಳ್ಳ ವಿದ್ಯಾಸಂಸ್ಥೆಯೆಂದು ಹೆಸರು ಪಡೆದುಕೊಂಡಿತು. ಆನಂತರದ ಕಾಲದಲ್ಲಿ ಆ ಪಾಠಶಾಲೆಯು 'ಶ್ರೀ ಜ್ಞಾನ ಸರಸ್ವತಿ ಪೀಠ'ವೆಂದು ಹೆಸರುಪಡೆದು ದೊಡ್ಡ ವಿಶ್ವವಿದ್ಯಾಲಯವಾಗಿ ರೂಪುಹೊಂದಿತು.

ವಿದ್ಯಾದೇವಿ ಸರಸ್ವತಿಯು ಅಂಥಹ ಕರುಣಾಮಯಿಯು. ಆ ತಾಯಿಯನ್ನು ಆರಾಧಿಸಿದವರಿಗೆ ವಿದ್ಯೆ, ವಿನಯ, ಸಂಪತ್ತುಗಳು ಲಭಿಸುತ್ತವೆ. ಓದಿನ ಮೇಲೆ ಸಂಪೂರ್ಣ ಏಕಾಗ್ರತೆಯನ್ನು ಪಡೆಯುತ್ತಾರೆ. ಅದ್ಭುತವಾದ ಗ್ರಹಣಶಕ್ತಿಯು ಉಂಟಾಗುತ್ತದೆ. ಜ್ಞಾಪಕಶಕ್ತಿಯು ತುಂಬಾ ಹೆಚ್ಚಾಗುತ್ತದೆ. ಆ ತಾಯಿಯು ತಿಳಿಸಿದ ಹಾಗೆ ಎಲ್ಲರೂ ಈ 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ನಿತ್ಯ ಆಚರಿಸಿ ಸಮಸ್ತ ಶ್ರೇಯಸ್ಸುಗಳೊಂದಿಗೆ ಜೀವಿಸಬಹುದು.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು

ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |
ವಾಸರಾ ಪೀಠನಿಲಯೇ ಸರಸ್ವತಿ ನಮೋಸ್ತುತೇ ||

*******

## ಮೂರನೇ ಅಧ್ಯಾಯ

# ಗೋಪಯ್ಯನ ಕಥೆ

ಪೂರ್ವಕಾಲದಲ್ಲಿ ಕೃಷ್ಣಾ ನದಿತೀರದಲ್ಲಿ ಪಂಡಿತಪುರಂ ಎಂಬ ಅಗ್ರಹಾರವಿತ್ತು. ಅದರಲ್ಲಿ ಅನೇಕ ಬ್ರಾಹ್ಮಣರ ಕುಟುಂಬಗಳಿತ್ತು. ಅಗ್ರಹಾರದಲ್ಲಿ ಒಂದು ದೊಡ್ಡ ವೇದ ಪಾಠಶಾಲೆಯಿತ್ತು. ಸುತ್ತುಮುತ್ತಲಿನ ಗ್ರಾಮಗಳಿಂದ ಅನೇಕ ವಿದ್ಯಾರ್ಥಿಗಳು ಬಂದು ಇಲ್ಲಿ ಓದುತ್ತಿದ್ದರು. ಈ ಪಾಠಶಾಲೆಯಲ್ಲಿ ಓದಿದವರು ಅನೇಕ ಶಾಸ್ತ್ರಗಳಲ್ಲಿ ತುಂಬಾ ಪ್ರಾವೀಣ್ಯತೆಯನ್ನು ಪಡೆದು, ಬಹಳ ಹೆಸರು ಪಡೆದುಕೊಳ್ಳುತ್ತಿದ್ದರು. ಸಾಕ್ಷಾತ್ ಆ ಸರಸ್ವತಿದೇವಿಯೇ ಈ ವಿದ್ಯಾಪೀಠದಲ್ಲಿ ನಡೆದಾಡುತ್ತಿರುತ್ತಾಳೆಂದು ಪ್ರಜೆಗಳು ಹೇಳಿಕೊಳ್ಳುತ್ತಿದ್ದರು. ಈ ಪಾಠಶಾಲೆಗೆ ಅಂಥಹ ಶ್ರೇಷ್ಠಹೆಸರಿತ್ತು.

ಆ ವೇದ ಪಾಠಶಾಲೆಯಲ್ಲಿ ಅನೇಕ ವಿದ್ಯಾರ್ಥಿಗಳು, ಉಪಾಧ್ಯಾಯರುಗಳು ಇದ್ದರು. ಈ ವೇದ ಪಾಠಶಾಲೆಯನ್ನು ದಿನಾಲೂ ಗುಡಿಸಿ, ಸ್ವಚ್ಛಮಾಡಲು ವೀರಯ್ಯನೆಂಬ ಕೆಲಸದವನಿದ್ದನು. ಪಾಠಶಾಲೆಯು ವಿಶಾಲವಾದ ಸ್ಥಳದಲ್ಲಿತ್ತು. ಹತ್ತಿರತ್ತಿರ ಐದು ಎಕರೆಗಳ ಪ್ರಾಂಗಾಣ. ಆ ಪಾಠಶಾಲೆಯ ಆವರಣದಲ್ಲಿ ಒಂದು ಕಡೆ ಚಿಕ್ಕ ಹಯಗ್ರೀವನ ಮೂರ್ತಿಯಿತ್ತು. ಹಾಗೆ ಆ ಪಾಠಶಾಲೆಯ ಪ್ರಾರ್ಥನಾ ಕಟ್ಟಡದಲ್ಲಿ ಒಂದು ಸುಂದರ ಸರಸ್ವತಿ ದೇವಿಯ ವಿಗ್ರಹವಿತ್ತು. ಪ್ರತಿದಿನ ಬೆಳಿಗ್ಗೆ ವಿದ್ಯಾರ್ಥಿಗಳೆಲ್ಲರೂ ಈ ಕಟ್ಟಡದಲ್ಲಿ ಪ್ರಾರ್ಥನೆಯನ್ನು ಮಾಡಿ ಸರಸ್ವತಿ ದೇವಿಗೆ ನಮಸ್ಕರಿಸಿ, ನಂತರ ಹೊರಗಿರುವ ಹಯಗ್ರೀವನಿಗೆ ನಮಸ್ಕರಿಸಿ ತಮ್ಮ ತಮ್ಮ ತರಗತಿಗಳಿಗೆ ಹೋಗುತ್ತಿದ್ದರು.

ವೀರಯ್ಯನು ಪ್ರತಿದಿನ ಈ ಪ್ರಾರ್ಥನಾ ಕಟ್ಟಡವನ್ನು ಸ್ವಚ್ಛಗೊಳಿಸುತ್ತಿದ್ದನು. ವೀರಯ್ಯನೊಟ್ಟಿಗೆ ಅವನ ಮಗ ಗೋಪಯ್ಯನೂ ಪಕ್ಕದಲ್ಲೇ ಸುತ್ತುತ್ತಿದನು. ಗೋಪಯ್ಯನಿಗೆ ಕೇವಲ ಮೂರು ವರ್ಷ. ತಂದೆಯೊಟ್ಟಿಗೆ ಆ ಪಾಠಶಾಲೆಯನ್ನೆಲ್ಲಾ ಸುತ್ತುತ್ತಿದನು. ಚಿಕ್ಕವನಾದರೂ ಗೋಪಯ್ಯನಿಗೆ ಬಹಳ ತೇಜೋಮಯವಾದ ಸರಸ್ವತಿ ದೇವಿಯ ವಿಗ್ರಹವು ತುಂಬಾ ಆಕರ್ಷಿಸಿತು. ಆ ತಾಯಿಯ ಕಣ್ಣಲ್ಲಿರುವ ಅಪ್ಯಾಯತೆ, ಅನುರಾಗ, ಈ ಚಿಕ್ಕ ಹುಡುಗನನ್ನು ಮಂತ್ರಮುಗ್ಧನನ್ನಾಗಿ ಮಾಡಿತು. ಪ್ರತಿದಿನ ಬೆಳಿಗ್ಗೆ ಆ ವಿಗ್ರಹದ ಎದುರಲ್ಲಿ ನಿಂತುಕೊಂಡು ಆ ತಾಯಿಯನ್ನೇ ನೋಡುತ್ತಿರುತ್ತಿದ್ದನು.

ಗೋಪಯ್ಯನು ಆಡುತ್ತ, ಹಾಡುತ್ತಾ, ಐದು ಸಂವತ್ಸರಗಳ ವಯಸ್ಸನ್ನು ತಲುಪಿದನು. ತನ್ನ ವಯಸ್ಸಿನ ಕೆಲವು ಮಕ್ಕಳು ಆ ಪಾಠಶಾಲೆಯಲ್ಲಿ ಓದುವುದನ್ನು ನೋಡಿದನು. ತನಗೆ ಕೂಡಾ ಅವರ ಹಾಗೆ ಓದಬೇಕೆಂದು ಬಯಸುತ್ತಿದ್ದನು. ಆದರೆ, ತನ್ನ ತಂದೆಯ ಮುಖಾಂತರ ಇದು ಸಾಧ್ಯವಿಲ್ಲವೆಂದು ತಿಳಿದನು. ತಂದೆಯೊಟ್ಟಿಗೆ ಪ್ರತಿದಿನ ಆ ಪಾಠಶಾಲೆಯನ್ನು ಸುತ್ತುತ್ತಾ, ಎಲ್ಲಿಯಾದರೂ ಪಾಠಪುಸ್ತಕಗಳು ಕಾಣಿಸಿದರೆ, ಅವುಗಳನ್ನು ಭಕ್ತಿಯಿಂದ ಕಣ್ಣುಗಳಿಗೆ ಮುಟ್ಟಿಸಿ ಇಡುತ್ತಿದ್ದನು. ಕೆಲವು ವಿದ್ಯಾರ್ಥಿಗಳು ತಮ್ಮ ಪುಸ್ತಕಗಳನ್ನು ಸರಿಯಾಗಿ ಇಟ್ಟುಕೊಳ್ಳದೇ ಅಲ್ಲಿ ಇಲ್ಲಿ ಬಿಸಾಡುತ್ತಿದ್ದರು. ಗೋಪಯ್ಯನು ಅವುಗಳನ್ನು ತೆಗೆದು ಶ್ರದ್ಧೆಯಿಂದ ಸರಿಯಾಗಿ ಜೋಡಿಸಿಡುತ್ತಿದ್ದನು. ಹೀಗೆ ಬೆಳೆದು ದೊಡ್ಡವನಾಗಿ ಹನ್ನೆರಡು ಸಂವತ್ಸರಕ್ಕೆ ಕಾಲಿಟ್ಟನು. ತಂದೆಗೆ ಹೊಲಗದ್ದೆಗಳ ಕೆಲಸಗಳಲ್ಲಿ ಸಹಾಯವನ್ನು ಮಾಡುತ್ತಿದ್ದನು. ಬೆಳಿಗ್ಗೆ ಮಾತ್ರ ವೇದಪಾಠಶಾಲೆಯ ಅವರಣವನ್ನೆಲ್ಲಾ ತಾನೇ ಸ್ವಚ್ಛವಾಗಿ ಗುಡಿಸುತ್ತಿದನು. ಕೊನೆಗೆ ಪ್ರಾರ್ಥನಾ ಕೊಠಡಿಯಲ್ಲಿರುವ ವಿದ್ಯಾದೇವಿ ಸರಸ್ವತಿಯ

ವಿಗ್ರಹವನ್ನು ನಮಸ್ಕರಿಸುತ್ತಿದ್ದನು. ಬರುವ ಜನ್ಮದಲ್ಲಾದರೂ ತನಗೆ ಈ ಪಾಠಶಾಲೆಯಲ್ಲಿ ಓದುವ ಭಾಗ್ಯವನ್ನು ಅನುಗ್ರಹಿಸೆಂದು ಪ್ರಾರ್ಥಿಸುತ್ತಿದ್ದನು. ದಿನಾಲು ಇವನನ್ನು ಗಮನಿಸುತ್ತಿದ್ದ ಸರಸ್ವತಿದೇವಿಗೆ ಗೋಪಯ್ಯನ ಮೇಲೆ ಕರುಣೆ ಉಂಟಾಯಿತು. ಆ ತಾಯಿಯು ಇವನನ್ನುಅನುಗ್ರಹಿಸಬೇಕೆಂದು ನಿಶ್ಚಯಿಸಿದಳು.

ಒಂದುದಿನ ಆ ಊರಿಗೆ ಕಾಂಚೀಪುರಂನಿಂದ ಮಹಾಪಂಡಿತನೊಬ್ಬನು ಬಂದನು. ಅಂಥಹ ಮಹಾಪಂಡಿತನು ಬಂದ ಸಂದರ್ಭವಾಗಿ ಮರುದಿನ ಬೆಳಿಗ್ಗೆ ದೊಡ್ಡ ವಿದ್ವತ್ ಸಭೆಯು ಏರ್ಪಾಡಾಯಿತು. ಆ ದಿನ ಮುಂಜಾನೆಯೇ ಗೋಪಯ್ಯನು ತಂದೆಯೊಟ್ಟಿಗೆ ಪಂಡಿತರ ಸಭೆ ಜರುಗುವ ಪ್ರದೇಶವನ್ನು ನಿರ್ಮಲವಾಗಿ ಸ್ವಚ್ಛ ಮಾಡಿದನು. ಸ್ವಲ್ಪಸಮಯಕ್ಕೆ ಆ ಸಭೆಯೆಲ್ಲ ವೇದಪಂಡಿತರಿಂದ, ವೇದಪಾಠಶಾಲೆಯ ಉಪಾಧ್ಯಾಯರಿಂದ, ವಿದ್ಯಾರ್ಥಿಗಳಿಂದ ತುಂಬಿಹೋಯಿತು. ಕಾಂಚೀಪುರದ ಪಂಡಿತನನ್ನು ಘನವಾಗಿ ಸನ್ಮಾನಿಸಿದರು. ಇದನ್ನೆಲ್ಲಾ ಗೋಪಯ್ಯನು ದೂರದಿಂದ ನಿಂತುಕೊಂಡು ಬಹಳ ಉತ್ಸಾಹದಿಂದ ನೋಡುತ್ತಿದ್ದನು. ಪಂಡಿತರೆಲ್ಲರೂ ಬೇರೆ ಬೇರೆ ಶಾಸ್ತ್ರಗಳ ವಿಷಯಗಳ ಮೇಲೆ ಮಾತನಾಡಿದರು. ಕೊನೆಗೆ ಕಾಂಚೀಪುರಂನಿಂದ ಬಂದಿದ್ದ ಆ ಮಹಾಪಂಡಿತನು ಅನೇಕ ಶಾಸ್ರ ವಿಷಯಗಳ ಮೇಲೆ ಮಾತನಾಡಿ, ಕೊನೆಗೆ ವ್ಯಾಕರಣಕ್ಕೆ ಸಂಬಂಧಿಸಿದ ಒಂದು ಸಮಸ್ಯೆಯನ್ನು ಹೇಳಿ, ಅಲ್ಲಿರುವವರು ಸಮಾಧಾನವನ್ನು ಕೊಡಬೇಕಾಗಿ ಹೇಳಿದನು. ತಾನು ಎಷ್ಟೋ ವೇದಸಭೆಗಳಲ್ಲಿ ಈ ಸಮಸ್ಯೆಯನ್ನು ಕೇಳಿದೆನೆಂದು, ಯಾರೂ ಸರಿಯಾದ ಸಮಾಧಾನವನ್ನು ಹೇಳಲಿಲ್ಲವೆಂದು ಹೇಳಿದನು. ಎಲ್ಲರು ಈ ಸಮಸ್ಯೆಯನ್ನು ಆಲಿಸಿದರು. ಆದರೆ, ಅಲ್ಲಿರುವ ವೇದಪಂಡಿತರಾಗಲಿ, ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಸಮಾಧಾನವನ್ನು ಹೇಳದವರಾದರು.

ಆ ಕ್ಷಣದಲ್ಲೇ ಸರಸ್ವತಿದೇವಿಗೆ ಗೋಪಯ್ಯನನ್ನು ತಾನು ಅನುಗ್ರಹಿಸಬೇಕೆಂದು ತೋಚಿತು. ಅಷ್ಟರಲ್ಲಿ ದೂರದಲ್ಲಿ ಎಲ್ಲಿಯೋ ನಿಂತುಕೊಂಡಿರುವ ಗೋಪಯ್ಯನು ಎಲ್ಲರಿಗೂ ಕೇಳಿಸುವ ಹಾಗೆ ಗಟ್ಟಿಯಾಗಿ ಹೀಗೆ ಹೇಳಿದನು. ಆ ಸಮಸ್ಯೆಗೆ ನಾನು ಸಮಾಧಾನವನ್ನು ಹೇಳುತ್ತೇನೆ ಎಂದನು. ಅಲ್ಲಿದ್ದರವರೆಲ್ಲರೂ ಆಶ್ಚರ್ಯಪಟ್ಟರು. ಅವರು ಏನೋ ಹೇಳಲುಹೋದಾಗ, ಗೋಪಯ್ಯನು ಆ ವ್ಯಾಕರಣ ಸಮಸ್ಯೆಗೆ ಸುಂದರವಾಗಿ ವಿವರವಾಗಿ ಸಮಾಧಾನವನ್ನು ಹೇಳಿದನು. ಅಲ್ಲಿದ್ದವರಿಗೆ ಬಾಯಲ್ಲಿ ಮಾತು ಹೊರಡಲಿಲ್ಲ. ಎಲ್ಲರೂ ಆಶ್ಚರ್ಯಪಡುತ್ತಿರುವಾಗ ಅಲ್ಲಿದ್ದ ಸರಸ್ವತಿದೇವಿಯ ವಿಗ್ರದಿಂದ ಹೀಗೆ ಕೇಳಿಬಂದು 'ಮಕ್ಕಳೇ! ಈ ಗೋಪಯ್ಯನಿಗೆ ವಿದ್ಯೆಯೆಂದರೆ ಬಹಳ ಶ್ರದ್ಧೆ. ಯಾವುದೇ ಸ್ತೋತ್ರಗಳು ಬಾರದಿದ್ದರೂ, ನಿತ್ಯ ನನ್ನನ್ನು ಆರಾಧಿಸಿದನು. ನಾನು ಇವನಿಗೆ ಈ ಕ್ಷಣದಲ್ಲೇ ಸಮಸ್ತ ವಿದ್ಯೆಗಳನ್ನು ಅನುಗ್ರಹಿಸಿದ್ದೇನೆ' ಎಂದು ಕೇಳಿಬಂತು. ಆಗ ಅಲ್ಲಿರುವವರೆಲ್ಲರೂ ತಮ್ಮ ಗರ್ವಕ್ಕೆ ನಾಚಿಕೆಯಾಗಿ ಸರಸ್ವತಿದೇವಿಯ ಕೃಪಾಕಟಾಕ್ಷವನ್ನು ಹೊಂದಿದ ಗೋಪಯ್ಯನನ್ನು ಘನವಾಗಿ ಸನ್ಮಾನಿಸಿದರು. ನಂತರದ ಕಾಲದಲ್ಲಿ ಗೋಪಯ್ಯನು ಮಹಾಪಂಡಿತನಾಗಿ ಹೆಸರು ಪಡೆದು, ಎಷ್ಟೋ ಮಹಾಶಿಷ್ಯರನ್ನು ತಯಾರುಮಾಡಿದನು.

ವಿದ್ಯಾದೇವಿ ಸರಸ್ವತಿಯು ಅಂಥಹ ಕರುಣಾಮಯಿ. ಆ ತಾಯಿಯನ್ನು ನಿತ್ಯವೂ ಸ್ಮರಿಸುವವರಿಗೆ ಸಕಲ ಶಾಸ್ತ್ರಜ್ಞಾನವು ಲಭಿಸುತ್ತದೆ. ಎಲ್ಲಾ ಪರೀಕ್ಷೆಗಳಲ್ಲಿಯೂ ಉತ್ತಮ

ಅಂಕಗಳನ್ನು ಪಡೆದು ಉತ್ತೀರ್ಣರಾಗುತ್ತಾರೆ. ಎಲ್ಲಾ ಕೆಲಸಕಾರ್ಯಗಳಲ್ಲಿಯೂ ಯಶಸ್ಸು ಉಂಟಾಗುತ್ತದೆ. ಆ ತಾಯಿಗೆ ಇವೇ ನಮ್ಮ ನಮಸ್ಕಾರಗಳು.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು

ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |
ವಾಸರಾ ಪೀಠನಿಲಯೇ ಸರಸ್ವತಿ ನಮೋಸ್ತುತೇ ||

*******

ನಾಲ್ಕನೇ ಅಧ್ಯಾಯ

## ಶಂಕರ ಶಾಸ್ತ್ರಿಯ ಕಥೆ

ಪೂರ್ವಕಾಲದಲ್ಲಿ ಗಂಗಾ ನದಿತೀರದಲ್ಲಿ ಮಹೇಶ್ವರಪುರಂ ಎಂಬ ಪಟ್ಟಣವಿತ್ತು. ಆ ಪಟ್ಟಣದಲ್ಲಿ ದೊಡ್ಡ ಶಿವಾಲಯವಿತ್ತು. ಆ ಊರಲ್ಲಿ ಬಹಳ ಪ್ರಸಿದ್ಧಿ ಹೊಂದಿದ ಸಂಗೀತ ಕಲಾಶಾಲೆಯಿತ್ತು. ಆ ಕಲಾಶಾಲೆಯಲ್ಲಿ ಸಂಗೀತ ಕಲಿತುಕೊಳ್ಳಲು ಸುತ್ತಮುತ್ತಲಿನ ಗ್ರಾಮಗಳಿಂದ ಅಲ್ಲದೇ ಬಹಳ ದೂರದ ಸ್ಥಳಗಳಿಂದ ಕೂಡಾ ವಿದ್ಯಾರ್ಥಿಗಳು ಬರುತ್ತಿದ್ದರು. ಅಲ್ಲಿರುವ ಉಪಾಧ್ಯಾಯರುಗಳು ವಿವಿಧ ಸಂಗೀತ ಸಂಪ್ರದಾಯಗಲ್ಲಿ ಅತ್ಯಂತ ನಿಷ್ಣಾವಂತರಾಗಿದ್ದರು. ಪ್ರತ್ಯೇಕವಾಗಿ ಬಹಳ ವೀಣಾ ಪ್ರಾವಿಣ್ಯತೆಯನ್ನು ಪಡೆದಿದ್ದ ವಿದ್ವಾಂಸರು ಈ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಈ ಪಾಠಶಾಲೆಯ ಪ್ರಧಾನೋಪಾಧ್ಯಾಯನಾದ ಶ್ರೀರಾಮ ಶರ್ಮನು ಹಿಂದೂಸ್ತಾನಿ ಸಂಗೀತದಲ್ಲಿ ಬಹಳ ಹೆಸರು ಹೊಂದಿದ್ದನು.

ಶ್ರೀರಾಮ ಶರ್ಮನಿಗೆ ಶಂಕರ ಶಾಸ್ತ್ರಿ ಎಂಬ ಮಗನಿದ್ದನು. ಮಗನನ್ನು ಹೇಗಾದರೂ ದೊಡ್ಡ ವೀಣಾ ವಿದ್ವಾಂಸನನ್ನಾಗಿ ತಯಾರುಮಾಡಬೇಕೆಂದು ಶ್ರೀರಾಮ ಶರ್ಮನಿಗೆ ಆಸೆಯಿತ್ತು. ವೀಣಾ ಪ್ರಾವಿಣ್ಯತೆಯ ಪರೀಕ್ಷೆಗೆ ಐದು ಸಂವತ್ಸರಗಳು ಅಧ್ಯಯನ ಮಾಡಬೇಕು. ಶಂಕರ ಶಾಸ್ತ್ರಿಯ ಐದು ಸಂವತ್ಸರಗಳು ಪೂರ್ತಿಯಾಯಿತು. ಆದರೆ ಪರೀಕ್ಷೆಯಲ್ಲಿ ವಿಫಲನಾದ. ಇದು ಶ್ರೀರಾಮ ಶರ್ಮನಿಗೆ ತುಂಬಾ ನೋವುಂಟು ಮಾಡಿತು.

ಶಂಕರ ಶಾಸ್ತ್ರಿಯು ಪುನಃ ಒಂದು ವರ್ಷದ ನಂತರ ಪರೀಕ್ಷೆಯನ್ನು ಬರೆದನು. ಆದರೆ, ಮತ್ತೆ ವಿಫಲನಾದ. ಶ್ರೀರಾಮ ಶರ್ಮನು ಮಗನನ್ನು ಮಹಾವೀಣಾ ವಿದ್ವಾಂಸನನ್ನಾಗಿ ನೋಡುವ ಭಾಗ್ಯವು ಇಲ್ಲವೇನೋ ಎಂದು ಬಾಧೆಪಡುತ್ತಿದ್ದನು. ಆನಂತರದ ಸಂವತ್ಸರದಲ್ಲಿಯೂ ಕೂಡಾ ಶಂಕರ ಶಾಸ್ತ್ರಿಯು ಪರೀಕ್ಷೆಯಲ್ಲಿ ಅನುತ್ತೀರ್ಣನಾದ. ಶ್ರೀರಾಮ ಶರ್ಮನಿಗೆ ಬಹಳ ನೋವಾಯಿತು. ದುರದೃಷ್ಟದಿಂದ ಪಕ್ಷವಾತ ಬಂದು ಮಂಚವನ್ನು ಹಿಡಿದನು. ಮಗನನ್ನು ವೀಣಾ ವಿದ್ವಾಂಸನನ್ನಾಗಿ ನೋಡಬೇಕೆಂದಿರುವ ಆಸೆ ತೀರುವ ಮೊದಲೇ, ಈ ಲೋಕವನ್ನು ತ್ಯಜಿಸುತ್ತೇನೋ ಎಂಬ ಆತಂಕ ಉಂಟಾಯಿತು. ಶಂಕರ ಶಾಸ್ತ್ರಿಗೆ ಕೂಡಾ ಬಹಳ ಬಾಧೆಯಾಯಿತು. ಈ ಬಾರಿಯ ಪರೀಕ್ಷೆಯಲ್ಲಿ ಹೇಗಾದರೂ ಉತ್ತೀರ್ಣನಾಗಲೇಬೇಕೆಂದು ಸಂಕಲ್ಪಿಸಿದನು. ಪ್ರತಿದಿನ ಮುಂಜಾನೆ ವೀಣೆಯನ್ನು ತೆಗೆದುಕೊಂಡು ಹೋಗಿ, ಗಂಗಾ ನದಿತೀರದಲ್ಲಿ ಕುಳಿತುಕೊಂಡು ತುಂಬಾ ಅಭ್ಯಾಸವನ್ನು ಮಾಡುತ್ತಿದ್ದನು. ಅಭ್ಯಾಸ ಮಾಡುತ್ತಿರುವಷ್ಟು ಹೊತ್ತು ಆ ಸರಸ್ವತಿದೇವಿಯನ್ನೇ ಮನಸ್ಸಿನ್ನಲ್ಲಿ ಸ್ಮರಿಸುತ್ತಿದ್ದನು. ಹೀಗೆ

ನಲವತ್ತು ದಿನಗಳು ಉರುಳಿತು. ಇವನ ಸಾಧನೆಯನ್ನು ಗಮನಿಸುತ್ತಿದ್ದ ಸರಸ್ವತಿದೇವಿಯು ಒಲಿದು, ಅವನೆದುರಲ್ಲಿ ಪ್ರತ್ಯಕ್ಷಳಾಗಿ ಹೀಗೆ ಹೇಳಿದಳು. 'ಮಗನೇ! ನಿನ್ನ ಕಠೋರ ದೀಕ್ಷೆಗೆ ಮೆಚ್ಚಿದೆನು. ನೀನು ನಾಳೆಯೇ 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಆಚರಿಸು. ಈಸಲದ ಪರೀಕ್ಷೆಯಲ್ಲಿ ನೀನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗುದೇ ಅಲ್ಲ, ಭವಿಷ್ಯದಲ್ಲಿ ದೊಡ್ಡ ವಿದ್ವಾಂಸನೆಂದು ಹೆಸರು ತಂದುಕೊಳ್ಳುತ್ತಿ ಎಂದು ಆ ವ್ರತದ ವಿಧಾನವನ್ನು ವಿವರಿಸಿ' ಅದೃಶ್ಯಳಾದಳು. ಶಂಕರ ಶಾಸ್ತ್ರಿಯು ಆ ತಾಯಿಯು ತನ್ನನ್ನು ಅನುಗ್ರಹಿಸಿದ್ದಕ್ಕೆ ಅನೇಕ ವಿಧಗಳಿಂದ ಸ್ತುತಿಸಿದನು. ಮನೆಗೆ ಬಂದು ಜರುಗಿದ ವಿಷಯವನ್ನೆಲ್ಲ ತಂದೆಗೆ ತಿಳಿಸಿದನು. ಶ್ರೀರಾಮ ಶರ್ಮನು ಆ ಸರಸ್ವತಿದೇವಿಯು ಇಷ್ಟು ಸಮಯದ ನಂತರ ತನ್ನ ಮಗನನ್ನು ಅನುಗ್ರಹಿಸದಕ್ಕೆ ಸಂತೋಷಿಸಿದನು.

ಆ ಮರುದಿನ ಮುಂಜಾನೆ ಶಂಕರ ಶಾಸ್ತ್ರಿಯು ಶುಚಿಯಾಗಿ ಸ್ನಾನವನ್ನು ಮಾಡಿ, 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಆಚರಿಸಿದನು. ವ್ರತವು ಪೂರ್ತಿಯಾದ ನಂತರ, ಆ ತಾಯಿಯನ್ನು ಸ್ತುತಿಸುತ್ತಾ ಒಂದು ಗಂಟೆಯ ಸಮಯ ಅದ್ಭುತವಾಗಿ ವೀಣೆಯನ್ನು ನುಡಿಸಿದನು. ಆಗ ಒಂದು ಅದ್ಭುತವು ಜರುಗಿತು. ಆ ವೀಣಾನಾದದಿಂದ ಹೊರಟ ದಿವ್ಯ ತರಂಗಗಳ ಪ್ರಭಾವದಿಂದ ಶ್ರೀರಾಮ ಶರ್ಮನ ಪಕ್ಷವಾತವು ಒಮ್ಮೆಲೇ ಮಾಯವಾಯಿತು. ಪೂರ್ತಿ ಆರೋಗ್ಯದಿಂದ ಎದ್ದು ಮಂಚದ ಮೇಲೆ ಕುಳಿತುಕೊಂಡನು. ಆ ಕುಟುಂಬವೆಲ್ಲಾ ತಮ್ಮನ್ನು ಈ ವಿಧವಾಗಿ ಅನುಗ್ರಹಿಸಿದ ಸರಸ್ವತಿದೇವಿಯನ್ನು ಬಹಳ ಸ್ತುತಿಸಿದರು. ಕುಟುಂಬದ ಸದಸ್ಯರೆಲ್ಲರೂ 'ಶ್ರೀ ಜ್ಞಾನ ಸರಸ್ವತಿ ವ್ರತ' ಪ್ರಸಾದವನ್ನು ಸ್ವೀಕರಿಸಿದರು.

ಆನಂತರ, ಕೆಲವು ದಿನಗಳಲ್ಲೇ ಜರುಗಿದ ಪರೀಕ್ಷೆಯಲ್ಲಿ ಶಂಕರ ಶಾಸ್ತ್ರಿಯು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದನು. ಮುಂದಿನ ದಿನಗಳಲ್ಲಿ ಶಂಕರ ಶಾಸ್ತ್ರಿಯು ಬಹಳ ದೊಡ್ಡ ವಿದ್ವಾಂಸನೆಂದು ಹೆಸರು ಪಡೆದನು. ಶ್ರೀರಾಮ ಶರ್ಮನ ಕನಸ್ಸು ನನಸಾಯಿತು. ಬದುಕಿದಷ್ಟು ದಿನ ಆ ಕುಟುಂಬವೆಲ್ಲಾ ಸರಸ್ವತಿದೇವಿಯ ಸೇವೆಯನ್ನು ಮಾಡುತ್ತಾ ಬಹಳ ಸುಖವಾಗಿ ಭಾಗ್ಯವಂತರಾಗಿ ಜೀವಿಸಿ, ಕೊನೆಗೆ ಮುಕ್ತಿಯನ್ನು ಪಡೆದರು.

ವಿದ್ಯಾದೇವಿ ಸರಸ್ವತಿಯು ಅಂಥಹಾ ದಯಾವಂತಳು. ಯಾರು ತನ್ನನ್ನು ಪೂರ್ತಿಯಾಗಿ ವಿಶ್ವಾಸದಿಂದ ಆರಾಧಿಸುತ್ತಾರೋ ಅವರನ್ನು ಸಂಪೂರ್ಣವಾಗಿ ಅನುಗ್ರಹಿಸುತ್ತಾಳೆ. ಆ ತಾಯಿಯು 'ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ತನ್ನ ಭಕ್ತನಿಗೆ ಅನುಗ್ರಹಿಸಿದ ಈ 'ಶ್ರೀ ಜ್ಞಾನ ಸರಸ್ವತಿ ವ್ರತ'ವು ತುಂಬಾ ಮಹಿಮೆಯುಳ್ಳದ್ದು. ಇದನ್ನು ಆಚರಿಸಿದವರಿಗೆ ಎಲ್ಲಾ ಕಲೆಗಳಲ್ಲೂ ಪ್ರಾವೀಣ್ಯತೆಯು ಲಭಿಸುತ್ತದೆ. ದೊಡ್ಡ ಕಲಾಕಾರರಾಗಿ, ಸಂಗೀತ ವಿದ್ವಾಂಸರಾಗಿ, ಮಹಾಪಂಡಿತರಾಗಿ, ಅದ್ಭುತ ಜ್ಞಾನಸಂಪನ್ನರಾಗಿ ಹೆಸರೊಂದುತ್ತಾರೆ. ಆ ತಾಯಿಗೆ ಇವೇ ನಮ್ಮ ಪ್ರಣಾಮಗಳು.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು

ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |
ವಾಸರಾ ಪೀಠನಿಲಯೇ ಸರಸ್ವತಿ ನಮೋಸ್ತುತೇ ||

*******

ಐದನೇ ಅಧ್ಯಾಯ

# ಭಾರದ್ವಾಜನ ಕಥೆ

ಪೂರ್ವಕಾಲದಲ್ಲಿ ಗೋದಾವರಿ ನದಿತೀರದಲ್ಲಿ ಕೌಂಡಿಣ್ಯನೆಂಬ ಬ್ರಾಹ್ಮಣನು ಇದ್ದನು. ಅವನು ಬಹಳ ನಿಷ್ಠಾವಂತನಾಗಿ ಯಾವಾಗಲೂ ದೈವ ಚಿಂತನೆಯಲ್ಲೇ ಕಾಲ ಕಳೆಯುತ್ತಿದ್ದನು. ವಂಶಪಾರಂಪರೆಯಾಗಿ ಬಂದ ಪೌರೋಹಿತ್ಯ ವೃತ್ತಿಯನ್ನು ನಿರ್ವಹಿಸುತ್ತಾ ಬಂದ ಸ್ವಲ್ಪಹಣದಲ್ಲೇ ಸುಖವಾಗಿ ಬದುಕುತ್ತಿದ್ದನು. ಊರವರೆಲ್ಲರಿಂದ ಒಳ್ಳೆಯವನೆಂದು ಹೆಸರು ಪಡೆದಿದ್ದನು. ಊರವರೆಲ್ಲರೂ ಸೇರಿ ಅವನಿಗೆ ಚಿಕ್ಕಮನೆಯನ್ನು ಕಟ್ಟಿಸಿ ಕೊಟ್ಟರು. ಆ ಮನೆಯಲ್ಲಿ ಹೆಂಡತಿ, ಮಗನೊಂದಿಗೆ ಸುಖವಾಗಿ ಬಾಳುತ್ತಿದ್ದನು.

ಎಲ್ಲಾ ಸರಿಯಾಗಿತ್ತು ಆದರೆ, ಕೌಂಡಿಣ್ಯನಿಗೆ ಒಂದೇ ಆತಂಕವಿತ್ತು. ತನ್ನ ಮಗ ಭಾರದ್ವಾಜನಿಗೆ ಸರಿಯಾಗಿ ವಿದ್ಯೆ ಹಿಡಿಯುತ್ತಿರಲಿಲ್ಲ. ಹಿರಿಯರಿಂದ ಬಂದ ಈ ಪೌರೋಹಿತ್ಯ ವೃತ್ತಿಯಲ್ಲಿ ಅವನ ಜೀವನವು ಕೂಡಾ ಸುಖವಾಗಿ ಮುಂದುವರಿಯುತ್ತದೆಂದು ಭಾವಿಸಿದರೆ, ಅವನಿಗೆ ಸ್ವಲ್ಪಾಕೂಡ ಓದು ಬರುತ್ತಿಲ್ಲ. ಯಾವಾಗಲೂ ತೃತೀಯ ಶ್ರೇಣಿಯಲ್ಲೇ ಉತ್ತೀರ್ಣನಾಗುತ್ತಾ ವೇದ ಪಾಠಶಾಲೆಯಲ್ಲಿ ಐದನೇ ಸಂವತ್ಸರಕ್ಕೆ ಕಾಲಿಟ್ಟನು. ಇನ್ನು ಏಳು ಸಂವತ್ಸರಗಳು ಅಧ್ಯಯನ ಮಾಡಬೇಕು. ಆಗಲೇ ಅವನಿಗೆ ಪೂರ್ಣಪ್ರಮಾಣದ ಪ್ರಾವಿಣ್ಯತೆಯು ಉಂಟಾಗುತ್ತದೆ. ಆದರೆ ಪ್ರತಿ ಸಂವತ್ಸರದ ಪರೀಕ್ಷೆಯಲ್ಲಿ ತುಂಬಾ ಕಡಿಮೆ ಶ್ರೇಣಿಯಲ್ಲಿ ಉತ್ತೀರ್ಣನಾಗಿರುತ್ತಿದ್ದನು. ಕೌಂಡಿಣ್ಯನಿಗೆ ಆತಂಕವಾಗುತ್ತಿತ್ತು.

ಇನ್ನು ಒಂದು ವಾರದಲ್ಲಿ ಐದನೇ ಸಂವತ್ಸರದ ಪರೀಕ್ಷೆಗಳು. ಈ ಪರೀಕ್ಷೆಯು ಹಿಂದಿನ ಪರೀಕ್ಷೆಗಿಂತ ಬಹಳ ಕಠಿಣವಾದದ್ದು. ಭಾರದ್ವಾಜನು ಈ ಪರೀಕ್ಷೆಯಲ್ಲಿ ನಿಜವಾಗಿ ಉತ್ತೀರ್ಣನಾಗುತ್ತಾನಾ? ಎಂಬ ಆತಂಕ ತಂದೆಗೆ ಹಿಡಿಯಿತು. ಹೀಗೆ ಆಲೋಚಿಸುತ್ತಿರುವಾಗ ಪಕ್ಕದ ಊರಿನಿಂದ ಜಮೀನುದಾರನ ಕೆಲಸದವನು ಬಂದನು. ಸ್ವಾಮೀ, ನಿಮ್ಮನ್ನು ಜಮೀನುದಾರನು ನಾಡಿದ್ದು ಮುಂಜಾನೆ ಆರುಗಂಟೆಗೆಲ್ಲಾ ಬರಬೇಕೆಂದರು. ಅವರ ಮನೆಯಲ್ಲಿ ಸ್ವರಸ್ವತಿ ವ್ರತವನ್ನು ಮಾಡಬೇಕೆಂದಿದೆಯಂತೆ ಎಂದು ಹೇಳಿ ಹೊರಟು ಹೋದನು. ಸರಸ್ವತಿ ವ್ರತವಾ? ಇದನ್ನು ನಾನು ಯಾವಾಗಲೂ ಕೇಳಿಲ್ವೆ? ಏನಾದರೇನು, ಆ ವ್ರತ ಯಾವುದೋ ತಾನು ಕೂಡಾ ತಿಳಿದುಕೊಳ್ಳಣವೆಂದು ಭಾವಿಸಿದನು.

ಆನಂತರ, ಎರಡನೇ ದಿನ ಮುಂಜಾನೆಯ ಕತ್ತಲಿನಲ್ಲೆದ್ದು, ಸ್ನಾನ ಮಾಡಿ, ಶುಭ್ರವಾದ ಬಟ್ಟೆಗಳನ್ನು ಧರಿಸಿ, ಪಕ್ಕದ ಊರಿನ ಜಮೀನುದಾರರ ಮನೆಯನ್ನು ಆರುಗಂಟೆಗೆಲ್ಲಾ ತಲುಪಿದನು. ಜಮೀನುದಾರನು ಕೌಂಡಿಣ್ಯನೊಂದಿಗೆ ಹೀಗೆ ಹೇಳಿದನು. 'ಸ್ವಾಮೀ! ಈ 'ಶ್ರೀ ಜ್ಞಾನ ಸರಸ್ವತಿ ವ್ರತ'ದ ಬಗ್ಗೆ ಹೋದವಾರವೇ ತಿಳಿಯಿತು. ಹಿಂದಿನ ಶನಿವಾರ, ನಾನಿಲ್ಲಿಂದ ಹತ್ತು ಮೈಲು ದೂರದಲ್ಲಿರುವ ರಾಮಪುರಂಗೆ ಯಾವುದೋ ಕೆಲಸಕ್ಕಾಗಿ ಹೋದಾಗ, ಅಲ್ಲಿ ಒಂದುಮನೆಯಲ್ಲಿ ಈ ವ್ರತವನ್ನಾಚರಿಸುವುದನ್ನು ನೋಡಿದೆನು. ಈ ವ್ರತವನ್ನು ಆಚರಿಸಿದರೆ ಮಕ್ಕಳಿಗೆ ಉತ್ತಮ ವಿದ್ಯೆ, ಜ್ಞಾನ, ಒಳ್ಳೆಯ ಗುಣ-ನಡತೆ ಉಂಟಾಗುತ್ತದೆಯಂತೆ. ಆ ವ್ರತ ವಿಧಾನವನ್ನೆಲ್ಲಾ ತಿಳಿದುಕೊಂಡಿದ್ದೇನೆ. ದಯೆಯಿಟ್ಟು ನೀವು ನನ್ನ ಕೈಯಿಂದ ಆ ವ್ರತಾಚರಣೆಯನ್ನು ಮಾಡಿಸಬೇಕು. ನನ್ನ ಮಕ್ಕಳು ಸರಿಯಾದ ಮಾರ್ಗದಲ್ಲಿಲ್ಲ. ಯಾವುದೇ ವಿನಯವಿಧೇಯತೆಗಳಿಲ್ಲ. ಈ 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಮಾಡಿದರೆ ಅವರಿಗೆ ಒಳ್ಳೆಯ ಗುಣನಡತೆಗಳು ಬರುತ್ತದೆಂದು ನನ್ನ ನಂಬಿಕೆ' ಎಂದು ಹೇಳಿದನು.

ಕೌಂಡಿಣ್ಯನು ಆ ದಂಪತಿಗಳ ಕೈಯಿಂದ ಆ 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಮಾಡಿಸಿದನು. ಆ ವ್ರತ ಕಥೆಗಳು ಅದ್ಭುತವಾಗಿದ್ದವು. ಆ ಕಥೆಗಳನ್ನು ಓದುತ್ತಿರುವಷ್ಟು ಹೊತ್ತು, ಆ ತಾಯಿ ಸರಸ್ವತಿಯೇ ಕೌಂಡಿಣ್ಯನ ಕಣ್ಣುಮುಂದೆ ನಿಂತಿದ್ದಳು. ವ್ರತವು ಪೂರ್ತಿಯಾದ ನಂತರ, ವ್ರತ ಪ್ರಸಾದವನ್ನು ಅವನು ಸ್ವಲ್ಪ ಪೊಟ್ಟಣದಲ್ಲಿ ಕಟ್ಟಿಕೊಂಡು, ಜಮೀನುದಾರನ ಹತ್ತಿರ ಅನುಮತಿ ಪಡೆದು, ತನ್ನ ಮನೆಗೆ ಬಂದನು. 'ಶ್ರೀ ಜ್ಞಾನ ಸರಸ್ವತಿ ವ್ರತ' ಪ್ರಸಾದವನ್ನು ತಾನು, ತನ್ನ ಹೆಂಡತಿಯು ಸ್ವೀಕರಿಸಿ, ತನ್ನ ಮಗನಿಗೆ ಕೂಡಾ ಕೊಟ್ಟನು. ಭಾರದ್ವಾಜನು ಭಕ್ತಿಯಿಂದ ಆ ಪ್ರಸಾದವನ್ನು ತೆಗೆದುಕೊಂಡನು.

ಅದ್ಭುತವಾದ 'ಶ್ರೀ ಜ್ಞಾನ ಸರಸ್ವತಿ ವ್ರತ'ದ ಪ್ರಸಾದವನ್ನು ಸ್ವೀಕರಿಸಿದುದರಿಂದ ಭಾರದ್ವಾಜನಿಗೆ ಆ ತಾಯಿಯ ಅನುಗ್ರಹ ಉಂಟಾಗಿ, ಐದನೇ ಸಂವತ್ಸರದ ಪರೀಕ್ಷೆಗಳನ್ನು ಚೆನ್ನಾಗಿ ಬರೆದನು. ಪರೀಕ್ಷೆಗಳು ಮುಗಿದ ಮೇಲೆ ಕೌಂಡಿಣ್ಯನು ತನ್ನ ಮನೆಯಲ್ಲಿ ಹೆಂಡತಿ, ಮಗನನ್ನು ಪಕ್ಕದಲ್ಲೇ ಕುಳ್ಳಿರಿಸಿ, 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಆಚರಿಸಿದನು. ಈ ವ್ರತ ಪ್ರಭಾವದಿಂದ ಭಾರದ್ವಾಜನು ಈ ಸಲ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದನು. ಆ ತಾಯಿ ಸರಸ್ವತಿಯು ಇಷ್ಟು ವರ್ಷಗಳ ನಂತರ ಕರುಣೆತೋರಿದ್ದಕ್ಕೆ ಕೌಂಡಿಣ್ಯನು ಅತ್ಯಾನಂದಪಟ್ಟನು. ಭಾರದ್ವಾಜನು ಹನ್ನೆರಡು ಸಂವತ್ಸರಗಳು ವೇದವಿದ್ಯೆಗಳನ್ನು ಕಲಿತು, ಪ್ರತಿ ಸಂವತ್ಸರವೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದನು. ದೊಡ್ಡ ಪಂಡಿತನೆಂದು ಹೆಸರು ಪಡೆದುಕೊಂಡನು. ಆವತ್ತಿನಿಂದ ಪ್ರತಿ ಸಂವತ್ಸರ ಆ ಕುಟುಂಬವು 'ಶ್ರೀ ಜ್ಞಾನ ಸರಸ್ವತಿ ವ್ರತ'ವನ್ನು ಆಚರಿಸುತ್ತಾ ಧೀರ್ಘಕಾಲ ಸಕಲ ಸುಖ ಸೌಭಾಗ್ಯಗಳೊಂದಿಗೆ ಜೀವಿಸಿದರು.

'ಶ್ರೀ ಜ್ಞಾನ ಸರಸ್ವತಿ ವ್ರತ'ವು ಮಹಾಮಹಿಮೆಯುಳ್ಳದ್ದು. ಈ ವ್ರತವನ್ನು ಆಚರಿಸುವುದು ಬಹಳ ಸುಲಭ. ಪ್ರತಿ ಸಂವತ್ಸರವು ಈ ವ್ರತವನ್ನು ಆಚರಿಸುವ ವಿದ್ಯಾಸಂಸ್ಥೆಗಳಲ್ಲಿ ಓದುವ ವಿದ್ಯಾರ್ಥಿಗಳು ತುಂಬಾ ವಿದ್ಯಾಸಂಪನ್ನತೆಯನ್ನು ಪಡೆಯುತ್ತಾರೆ. ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಾರೆ. ಅಷ್ಟೇಅಲ್ಲ, ಅವರಿಗೆ ಒಳ್ಳೆಯ ಗುಣನಡತೆ ಉಂಟಾಗುತ್ತದೆ. ಬಹಳ ಶ್ರೇಷ್ಠ ಸಂಸ್ಕಾರವಂತರಾಗುತ್ತಾರೆ. ಸತ್ಪ್ರವರ್ತನೆಯಿಂದ ಜೀವಿಸುತ್ತಾರೆ. ಉನ್ನತ ಶ್ರೇಣಿಯ ಉದ್ಯೋಗಗಳನ್ನು ಪಡೆಯುತ್ತಾರೆ. ತಾಯಿ ಶ್ರೀ ಸರಸ್ವತಿದೇವಿಯು 'ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ತನ್ನ ಭಕ್ತನಿಗೆ ಅನುಗ್ರಹಿಸಿದ ಈ ವ್ರತವು ಕಲಿಯುಗದಲ್ಲಿ ವಿದ್ಯೆಯಲ್ಲಿ ರಾರಾಜಿಸಲು ಬಹಳ ಸುಲಭವಾದ ಮಾರ್ಗ. ಇಂಥಹ ಸುಲಭದ ವ್ರತವನ್ನು ನಮಗೆ ಅನುಗ್ರಹಿಸಿದಕ್ಕಾಗಿ ಆ ತಾಯಿಗೆ ನಾವೆಲ್ಲರೂ ಪ್ರಣಾಮಗಳನ್ನು ಸಲ್ಲಿಸೋಣ.

ಐದನೇ ಅಧ್ಯಾಯವು ಸಂಪೂರ್ಣವಾಯಿತು

ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |
ವಾಸರಾ ಪೀಠನಿಲಯೇ ಸರಸ್ವತಿ ನಮೋಸ್ತುತೇ ||

ಶ್ರೀ ಜ್ಞಾನ ಸರಸ್ವತಿ ಸಮಾಪ್ತಂ

*******

# ಶ್ರೀ ಜ್ಞಾನ ಸರಸ್ವತಿ ಪ್ರಾರ್ಥನ

ಶುದ್ಧಾಂ ಬ್ರಹ್ಮವಿಚಾರ ಸಾರ, ಪರಮಾಂ ಆದ್ಯಂ ಜಗದ್ವ್ಯಾಪಿಣೀಮ್ |
ವೀಣಾ ಪುಸ್ತಕ ಧಾರಿಣೀಮ್ ಅಭಯ ದಾಂ ಜಾಡ್ಯಾಂಧಕಾರಾಪಹಮ್ |
ಹಸ್ತೇ ಸ್ಪಟಿಕಮಲಿಕಾಂ ವಿದಧತೀಮ್ ಪದ್ಮಾಸನೆ ಸಂಸ್ಥಿತಾಂ |
ವಂದೇ ತಾಂ ಪರಮೇಶ್ವರೀಮ್ ಭಾಗವತೀಮ್ ಬುದ್ಧಿ:ಪ್ರದಾಂ ಶಾರದಾಂ ||

ಯಾ ಕುಂದೇಂದು ತುಷಾರಹಾರ ಧವಳಾ ಯಾಶುಭ್ರ ವಸ್ತ್ರಾನ್ವಿತ |
ಯಾ ವೀಣಾ ವರದಂಡ ಮಂಡಿತಕರಾ ಯಾಶ್ವೇತ ಪದ್ಮಾಸನಾ |
ಯಾ ಬ್ರಹ್ಮಾಚ್ಯುತ ಶಂಕರ ಪ್ರಭೃತಿಭಿರ್ದೇವೈಸ್ಸದಾ ಪೂಜಿತಾ |
ಸಾಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ ||

ಯಾ ಮಾಯಾ ಮಧುಕೈಟಭ ಪ್ರಮಥನಿ ಯಾ ಮಹಿಶೋ ನ್ಮೂಲಿನಿ |
ಯಾದೂಮ್ರೇಕ್ಷಣ ದಂಡ ಮುಂಡ ಮಥನಿ ಯಾ ರಕ್ತಬೀಜಾಸಿನಿ |
ಶಕ್ತಿ ಶುಂಭ ನಿಶುಂಭ ದೈತ್ಯ ದಲಿನಿ ಯಾ ಸಿದ್ಧ ಲಕ್ಷ್ಮೀ:ಪರಾ |
ಸಾ ಚಂಡೀ ನವಕೋಟಿ ಮೂರ್ತಿ ಸಹಿತಾ ಮಾಂ ಪಾತು ವಿಶ್ವೇಶ್ವರಿ ||

ಸಿದ್ಧಲಕ್ಷ್ಮೀ ಮೋಕ್ಷಲಕ್ಷ್ಮೀ ಜಯಲಕ್ಷ್ಮೀ ಸರಸ್ವತಿ |
ಶ್ರೀಲಕ್ಷ್ಮೀ ವರಲಕ್ಷ್ಮೀ ಚ ಪ್ರಸನ್ನ ಮಮ ಸರ್ವದಾ ||

ಸರ್ವ ಮಂಗಳ ಮಾಂಗಳ್ಯೇ ಶಿವೆ ಸರ್ವಾರ್ಥ ಸಾಧಿಕೇ |
ಶರಣ್ಯೇ ತ್ರಯಂಬಕೇ ಗೌರಿ ನಾರಾಯಣಿ ನಮೋಸ್ತುತೇ ||

ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |
ವಾಸರಾ ಪೀಠನಿಲಯೇ ಸರಸ್ವತಿ ನಮೋಸ್ತುತೇ ||

*******



ಶರದಿಂದು ಸಮಾಕಾರೇ ಪರಬ್ರಹ್ಮ ಸ್ವರೂಪಿಣಿ |
ವಾಸರಾ ಪೀಠನಿಲಯೇ ಸರಸ್ವತಿ ನಮೋಽಸ್ತುತೇ ||



**ತಲ್ಲೀ! ನಿನ್ನುದಲಂಚಿ ಪುಸ್ತಕಮು ಚೇತಂಬೂನಿತಿನ್.**
**ನೀವು ನಾಯುಲ್ಲ೦ ಬಂದುನ ನಿಲ್ಚಿ ವಿಜೃಂಭಣಮುಗಾ ನುಕ್ತುಲ್**
**ಸುಶಬ್ದ೦ಬು ಶೋಭಿಲ್ಲ೦ ಬಲ್ಕುಮು.**
**ನಾದುವಾಕ್ಕುನನ್ ಸಂಪ್ರೀತಿನ್ ಜಗನ್ಮೋಹಿನೀ!**
**ಪುಲ್ಲಬ್ಜಾಕ್ಷಿ! ಸರಸ್ವತಿ! ಭಗವತಿ! ಪೂರ್ಣೇದು ಬಿಂಬಾಸನಾ!**